**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ಮತ್ತು ವಿಶೇಷ ನ್ಯಾಯಾಧೀಶರು**
**ಚಿಕ್ಕಮಗಳೂರು.**

**ಸ್ಪೆಷಲ್ ಮೊಕದ್ದಮೆ ಸಂಖ್ಯೆ 24/2022**

| | | |
|---|---|---|
| ಆರೋಪಿಯ ಹೆಸರು | : | ಮನು ಕೆ.ಎಂ |
| ತಂದೆಯ ಹೆಸರು | : | ಮರುಳಪ್ಪ |
| ವಯಸ್ಸು | : | 41 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸಸ್ಥಳ | : | ಕಂಚುಗಲ್ ಗ್ರಾಮ, ಎಸ್ ಬಿದರೆ ಅಂಚೆ, ಕಡೂರು ತಾಲ್ಲೂಕು |

**<u>ಕಲಂ 313 ಸಿ.ಆರ್ ಪಿ.ಸಿ. ಅಡಿಯಲ್ಲಿ ಆರೋಪಿತನ ವಿಚಾರಣೆ</u>**

ಪ್ರಶ್ನೆ-1 ಅಭಿಯೋಜನೆಯ ಸಾಕ್ಷಿಗಳ ಸಾಕ್ಷ್ಯ ವಿಚಾರವನ್ನು ಕೇಳಿದ್ದೀರಾ?

ಉತ್ತರಃ ಕೇಳಿದ್ದೇನೆ

ಪ್ರಶ್ನೆ-2 ಪ್ರಾಸಾ.1 ಸುರೇಶ್ ಕೆ.ಸಿ ಇವರು ತಮ್ಮ ಸಾಕ್ಷ್ಯದಲ್ಲಿ ಈಗ್ಗೆ ಎರಡು ವರ್ಷದ ಹಿಂದೆ ಪೊಲೀಸರು ಕೊಲೆಯಾದ ಸಂಬಂಧ ಚಾಸಾ.15-ವಾಸುದೇವ ರವರ ಕಾಫಿ ತೋಟದ ಕೂಲಿ ಲೈನಿಗೆ ಹೋಗಿ ನಿಪಿ.2 ರಂತೆ ಸ್ಥಳ ಮಹಜರು ಮಾಡಿದ್ದಾಗಿ, ಸ್ಥಳದಿಂದ ರಕ್ತ, ಗೋಡೆಯ ಮಣ್ಣು, ಚೀಲ, ಬನಿಯನ್ ಮುದ್ದೆಮಾಲು-1 ರಿಂದ 4 ನ್ನು ಅಮಾನತುಪಡಿಸಿಕೊಂಡಿದ್ದಾಗಿ, ನಿಪಿ.3 ರಿಂದ ನಿಪಿ.5 ರಂತೆ ಪೋಟೊಗಳನ್ನು ತೆಗೆದಿದ್ದಾಗಿ ಹಾಗೂ ಗೋಡೆಯಿಂದ ಶೇಖರಿಸಿದ ರಕ್ತ ಮಿಶ್ರಿತ ಮಣ್ಣು ಹಾಗೂ ಹತ್ತಿಯಲ್ಲಿ ಶೇಖರಿಸಿದ ರಕ್ತವನ್ನು ಮುದ್ದೆಮಾಲು-5 ಮತ್ತು 6 ರಂತೆ ಹಾಗೂ ಬಿಸ್ಕೆಟ್ ಬಣ್ಣದ ಟೀ ಶರ್ಟನ್ನು ಮುದ್ದೆಮಾಲು-7 ರಂತೆ ಅಮಾನತುಪಡಿಸಿ ಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-3 ಪ್ರಾಸಾ.2 ಶಾಂತಪ್ಪ ಇವರು ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀನು ಅವರ ಮಗ ಮೃತ ಶೇಷಪ್ಪನನ್ನು ಕಬ್ಬಿನಹಳ್ಳಿ ಎಸ್ಟೇಟಿಗೆ ಕೆಲಸಕ್ಕೆ ಕರೆದುಕೊಂಡು ಹೋಗಿದ್ದಾಗಿ ಸಾಕ್ಷ್ಯನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-4 ಪ್ರಾ.ಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅವರು ಹಾನುಬಾಳು ಗ್ರಾಮದ ಎಸ್ಟೇಟ್ ಒಂದರಲ್ಲಿ ಕೆಲಸ ಮಾಡಿಕೊಂಡು ಸದರಿ ಎಸ್ಟೇಟಿನ ಕೂಲಿ ಲೈನ್ ಮನೆಯಲ್ಲಿ ಅವರು, ಅವರ ಹೆಂಡತಿ ಚಾಸಾ.7-ಅಪ್ಪಿ ಮತ್ತು ಅವರ ಹಿರಿಯ ಮಗನಾದ ಶೇಷಪ್ಪ ವಾಸವಾಗಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-5 ಪ್ರಾ.ಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಆ ಸಮಯದಲ್ಲಿ ಅವರ ಮಗ ಶೇಷಪ್ಪ ಸಹ ಸದರಿ ಎಸ್ಟೇಟಿನಲ್ಲಿ ಅವರೊಂದಿಗೆ ಕೆಲಸಕ್ಕೆ ಬರುತ್ತಿದ್ದುದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-6 ಪ್ರಾ.ಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಂತರ ಶೇಷಪ್ಪನನ್ನು ಆರೋಪಿಯಾದ ನೀನು ಕಬ್ಬಿನಹಳ್ಳಿ ಎಸ್ಟೇಟಿಗೆ ಕರೆದುಕೊಂಡು ಹೋಗಿ ಕೆಲಸಕ್ಕೆ ಸೇರಿಸಿದ ವಿಚಾರವನ್ನು ಈಗ್ಗೆ 3 ವರ್ಷಗಳ ಹಿಂದೆ ಅವರ ಮಗ ಶೇಷಪ್ಪ ಅವರಿಗೆ ಫೋನ್ ಮಾಡಿ ತಿಳಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-7 ಪ್ರಾ.ಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಆ ಸಮಯದಲ್ಲಿ ಸದರಿ ಎಸ್ಟೇಟಿನಲ್ಲಿರುವ ಕೂಲಿ ಲೈನ್ ಮನೆಗಳ ಪೈಕಿ ಒಂದೇ ಮನೆಯಲ್ಲಿ ಅವರು ಮತ್ತು ಆರೋಪಿಯಾದ ನೀನು ವಾಸವಿರುವುದಾಗಿ ಅವರ ಮಗ ಅವರಿಗೆ ತಿಳಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-8 ಪ್ರಾ.ಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅದಾದ ಒಂದು ತಿಂಗಳಿಗೆ ಕಬ್ಬಿನಹಳ್ಳಿ ಎಸ್ಟೇಟಿನ ಮಾಲೀಕರು ಅವರಿಗೆ ರಾತ್ರಿ ಸುಮಾರು 9.00 ಗಂಟೆಗೆ ಫೋನ್ ಮಾಡಿ ನಿಮ್ಮ ಮಗ ಶೇಷಪ್ಪನಿಗೆ ಹುಷಾರಿಲ್ಲ ನೀವು ಬರಬೇಕು ಎಂದು ಹೇಳಿದಾಗಿ, ಅವರು ಮಾರನೇ ದಿನ ಬೆಳಿಗ್ಗೆ 9.00 ಗಂಟೆಗೆ ಚಿಕ್ಕಮಗಳೂರಿನ ಸರ್ಕಾರಿ ಆಸ್ಪತ್ರೆಗೆ ಅವರ ಹೆಂಡತಿ, ಅವರ ಮಗಳು, ಅವರ ತಮ್ಮ ಮತ್ತು ಅವರ ತಮ್ಮನ ಮಗ ಹೋಗಿ ನೋಡುವಷ್ಟರಲ್ಲಿ ಅವರ ಮಗ ಶೇಷಪ್ಪ ಮೃತಪಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು

ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-9 ಫ್ರಾ.ಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅವರು ಅವರ ಮಗನ ಶವವನ್ನು ನೋಡಿದಾಗ ಆತನ ಕುತ್ತಿಗೆ, ಹೊಟ್ಟೆ ಎರಡೂ ಕೆನ್ನೆಯ ಬಳಿ ಕತ್ತಿಯಿಂದ ಕಡಿದಿರುವುದು ಕಂಡು ಬಂದಿದ್ದಾಗಿ, ನಂತರ ಅವರೆಲ್ಲರೂ ಚಿಕ್ಕಮಗಳೂರು ಪೊಲೀಸ್ ಠಾಣೆಗೆ ಹೋಗಿ ಆರೋಪಿಯಾದ ನಿನ್ನ ವಿರುದ್ಧ ನಿಪಿ.6 ರಂತೆ ದೂರನ್ನು ಕೊಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-10 ಫ್ರಾ.ಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ದೂರು ನೀಡಿದ ಎರಡು ತಿಂಗಳ ಬಳಿಕ ಪೊಲೀಸರು ಅವರಿಗೆ ಫೋನ್ ಮಾಡಿ ಠಾಣೆಗೆ ಕರೆಸಿದ್ದಾಗಿ, ಆರೋಪಿಯಾದ ನೀನು ಅವರ ಮಗ ಶೇಷಪ್ಪನನ್ನು ಕೊಲೆ ಮಾಡಿರುವುದಾಗಿ ತಿಳಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-11 ಫ್ರಾ.ಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಕಬ್ಬಿನಹಳ್ಳಿ ಎಸ್ಟೇಟಿನ ಮಾಲೀಕರು ಆರೋಪಿಯಾದ ನೀನು ಮತ್ತು ಅವರ ಮಗ ಒಟ್ಟಿಗೆ ಕೆಲಸಕ್ಕೆ ಬರುತ್ತಿದ್ದುದ್ದಾಗಿ ಮತ್ತು ಒಂದೇ ಮನೆಯಲ್ಲಿ ವಾಸವಾಗಿದ್ದಾಗಿ, ಆದರೆ ಬುಧವಾರದಂದು ಅವರು ಕೆಲಸಕ್ಕೆ ಹೋಗದೇ ಇದ್ದಾಗ ಅವರು ವಾಸವಿದ್ದ ಕೂಲಿ ಲೈನ್ ಮನೆಗೆ ಸಂಜೆ 5.00 ಗಂಟೆ ಸುಮಾರಿಗೆ ಹೋಗಿ ನೋಡಿದಾಗ ಮನೆಯ ಬಾಗಿಲು ತೆಗೆದಿದ್ದಾಗಿ, ನಂತರ ಅವರು ಮನೆಯ ಒಳಗೆ ಟಾರ್ಚ್ ಬಿಟ್ಟು ನೋಡಿದಾಗ ಅವರ ಮಗ ಶೇಷಪ್ಪ ಮಲಗಿದ್ದ ರೀತಿ ಕಂಡು ಬಂದಿದ್ದಾಗಿ ಮತ್ತು ಆತನ ಸುತ್ತ ರಕ್ತ ಹರಿದಿದ್ದು ಕಂಡು ಬಂದಿದ್ದಾಗಿ ನಂತರ ಎಸ್ಟೇಟ್ ಮಾಲೀಕರು ರಾತ್ರಿ 9.00 ಗಂಟೆಗೆ ಅವರಿಗೆ ಫೋನ್ ಮಾಡಿ ವಿಷಯವನ್ನು ತಿಳಿಸಿದರೆಂದು ತಿಳಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-12 ಫ್ರಾ.ಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಪೋಸ್ಟ್ ಮಾರ್ಟಮ್ ಮಾಡಿಸಿದ ಬಳಿಕ ಹೆಣ ಸಂದಾಯ ರಶೀದಿ ನಿಪಿ.8 ರಲ್ಲಿ ಅವರ ಹೆಬ್ಬೆಟ್ಟನ್ನು

ಪಡೆದು ಅವರ ಮಗನ ಶವವನ್ನು ಪೊಲೀಸರು ಅವರಿಗೆ ಕೊಟ್ಟಿದ್ದಾಗಿ, ನಿಪಿ.9 ಮತ್ತು ನಿಪಿ.10 ಫೋಟೋಗಳಲ್ಲಿ ಅವರ ಮಗನ ಶವ ಕಂಡುಬರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-13 ಫಿ್ರಾ.ಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಪೊಲೀಸ್ ಠಾಣೆಯಲ್ಲಿ ಪೊಲೀಸರು ಒಂದು ಕತ್ತಿ ಮತ್ತು ಚಾಕು ಮುದ್ದೆಮಾಲು-8 ಮತ್ತು 9 ನ್ನು ತೋರಿಸಿ, ಆರೋಪಿಯಾದ ನೀನು ಅವುಗಳಿಂದ ಅವರ ಮಗನನ್ನು ಕಡಿದಿದ್ದಾಗಿ ಪೊಲೀಸರು ತಿಳಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-14 ಫಿ್ರಾ.ಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ದಿಃ 17.11.2021 ರಂದು ಬುಧವಾರ ಆರೋಪಿಯಾದ ನೀನು ಮತ್ತು ಅವರ ಮಗ ಶೇಷಪ್ಪ ಸಂತೆ ಸಾಮಾನುಗಳನ್ನು ತೆಗೆದುಕೊಂಡು ಬಂದು ಸಂಜೆ 5.00 ಗಂಟೆ ಸಮಯದಲ್ಲಿ ಅಡುಗೆ ಮಾಡುವ ವಿಚಾರದಲ್ಲಿ ಇಬ್ಬರೂ ಗಲಾಟೆ ಮಾಡಿಕೊಂಡಿದ್ದಾಗಿ, ಗಲಾಟೆಯ ಶಬ್ದ ಚಾಸಾ.16 ಚೇತನ್ ರವರಿಗೆ ಕೇಳಿ ಅವರು ಬುದ್ಧಿ ಹೇಳಿದರೆಂದು ತಿಳಿದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-15 ಫಿ್ರಾ.ಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ದಿಃ 18.11.2021 ರಂದು ಸಂಜೆ ಚಾಸಾ.16 ರವರು ಅವರ ಮಗ ಶೇಷಪ್ಪ ಮತ್ತು ಆರೋಪಿಯಾದ ನೀನು ವಾಸವಿದ್ದ ಕೂಲಿ ಲೈನಿನ ಮನೆಯ ಬಳಿ ಹೋಗಿ ಇಬ್ಬರ ಹೆಸರನ್ನು ಕೂಗಿ ಕರೆದಿದ್ದಾಗಿ, ಆಗ ಯಾರೂ ಮಾತನಾಡದೇ ಇದ್ದಾಗ ಕಿಟಕಿಯಿಂದ ಟಾರ್ಚ್ ಹಾಕಿ ನೋಡಿದಾಗ ಅವರ ಮಗನ ಕಾಲುಗಳು ಮತ್ತು ರಕ್ತ ಕಂಡು ಬಂದಿದ್ದಾಗಿ, ನಂತರ ಆ ವಿಚಾರವನ್ನು ತೋಟದ ಮಾಲೀಕರಿಗೆ ತಿಳಿಸಿದ್ದಾಗಿ ತಿಳಿದುಬಂತೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-16 ಫಿ್ರಾ.ಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಂತರ ಆರೋಪಿಯಾದ ನೀನು ಎಸ್ಟೇಟಿನಲ್ಲಿ ಎಲ್ಲಿಯೂ ಕಂಡು ಬರದಿದ್ದಾಗಿ ತಿಳಿದುಬಂತೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-17 ಫ್ರಾ.ಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಆರೋಪಿಯಾದ ನೀನು ಅಡುಗೆ ಮಾಡುವ ವಿಚಾರದಲ್ಲಿ ಅವರ ಮಗನೊಂದಿಗೆ ಜಗಳ ತೆಗೆದು ಕತ್ತಿಯಿಂದ ಆತನ ಕುತ್ತಿಗೆ, ಮುಖ, ಗಲ್ಲಕ್ಕೆ ಕಡಿದು ಚಾಕುವಿನಿಂದ ಹೊಟ್ಟೆಗೆ ಚುಚ್ಚಿ ಕೊಲೆ ಮಾಡಿದ್ದಾಗಿ ತಿಳಿದು ಬಂದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-18 ಫ್ರಾ.ಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಿಪಿ.1 ದೂರು ನೀಡಿದ ಮಾರನೇ ದಿನ ಅಂದರೆ ದಿಃ 20.11.2021 ರಂದು ಅವರು ಚಿಕ್ಕಮಗಳೂರು ಗ್ರಾಮಾಂತರ ಪೊಲೀಸ್ ಠಾಣೆಗೆ ಹೋಗಿದ್ದಾಗ ಪೊಲೀಸರು ದಸ್ತಗಿರಿ ಮಾಡಿದ ಆರೋಪಿಯಾದ ನಿನ್ನನ್ನು ಅವರಿಗೆ ತೋರಿಸಿ, ಆ ಬಗ್ಗೆ ಅವರು ಪೊಲೀಸರಿಗೆ ಮುಂದುವರೆದ ಹೇಳಿಕೆಯನ್ನು ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-19 ಫ್ರಾ.ಸಾ.3 ಗುರುವ ಇವರು ತಮ್ಮ ಸಾಕ್ಷ್ಯದಲ್ಲಿ ಶೇಷಪ್ಪ ಚಾಸಾ.15-ವಾಸುದೇವರವರ ಕಾಫಿ ತೋಟದಲ್ಲಿ ಕೂಲಿ ಕೆಲಸ ಮಾಡಿಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-20 ಫ್ರಾ.ಸಾ.3 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಈಗ್ಗೆ 4 ವರ್ಷಗಳ ಹಿಂದೆ ಒಂದು ದಿನ ರಾತ್ರಿ 10.00 ಗಂಟೆ ಸುಮಾರಿಗೆ ಫ್ರಾಸಾ-2 ರವರು ಅವರಿಗೆ ಫೋನ್ ಮಾಡಿ, ಶೇಷಪ್ಪನ ಕೊಲೆಯಾಗಿರುವುದಾಗಿ ತಿಳಿಸಿದಾಗ ಬಸ್ಸಿನ ಸೌಕರ್ಯವಿಲ್ಲದ ಕಾರಣ ಅವರಿಗೆ ಕೂಡಲೇ ಹೊರಡಲು ಆಗಲಿಲ್ಲ, ನಂತರ ಮಾರನೇ ದಿನ ಬೆಳಿಗ್ಗೆ 10.30 ರಿಂದ 11.00 ಗಂಟೆ ಒಳಗೆ ಚಿಕ್ಕಮಗಳೂರಿನ ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ಹೋದಾಗ ಶವಾಗಾರದಲ್ಲಿ ಶೇಷಪ್ಪನ ಶವವನ್ನು ಇರಿಸಿದ್ದಾಗಿ, ಅವರು ನೋಡಿದಾಗ ಆತನ ಮುಖದ ಬಲಭಾಗದಲ್ಲಿ, ಕುತ್ತಿಗೆಯ ಬಳಿ, ಹೊಟ್ಟೆಯ ಬಳಿ ಮತ್ತು ತಲೆಯ ಹಿಂಭಾಗದಲ್ಲಿ ಯಾವುದೋ ಕತ್ತಿಯಿಂದ ಕಡಿದಾಗ ಆಗುವಂತಹ ಗಾಯಗಳು ಕಂಡು ಬಂದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-21 ಫ್ರಾ.ಸಾ.3 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಶೇಷಪ್ಪನ ಕೊಲೆಯಾಗುವ 4 ದಿನಗಳ ಹಿಂದೆ ಚಾಸಾ-15 ವಾಸುದೇವರವರ ಎಸ್ಟೇಟಿನಲ್ಲಿರುವ ಕೂಲಿ ಲೈನ್ ಗೆ ಹೋಗಿದ್ದಾಗಿ, ಅಲ್ಲಿ ಒಂದೇ ಮನೆಯಲ್ಲಿ ಆರೋಪಿಯಾದ ನೀನು ಮತ್ತು ಶೇಷಪ್ಪ ಒಟ್ಟಿಗೆ ವಾಸವಾಗಿರುವುದನ್ನು ನೋಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-22 ಫ್ರಾ.ಸಾ.3 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಶವಾಗಾರದಲ್ಲಿ ಅವರು ಚಾಸಾ-15 ವಾಸುದೇವ್ ರವರನ್ನು ಕುರಿತು ಏನಾಯಿತೆಂದು ಕೇಳಿದಾಗ, ಬುಧವಾರದಂದು ರಜೆ ಇದ್ದ ಕಾರಣ ಆ ದಿನ ಅವರು ಆರೋಪಿಯಾದ ನಿನಗೆ ಮತ್ತು ಶೇಷಪ್ಪ ರವರಿಗೆ ತಲಾ ರೂ.5000/- ಕೂಲಿ ಹಣವನ್ನು ಕೊಟ್ಟಿದ್ದಾಗಿ ತಿಳಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-23 ಫ್ರಾ.ಸಾ.3 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಮಾರನೇ ದಿನ ಅಂದರೆ ಗುರುವಾರ ಆರೋಪಿಯಾದ ನೀನು ಮತ್ತು ಶೇಷಪ್ಪ ಕೆಲಸಕ್ಕೆ ಬರದಿದ್ದ ಕಾರಣ ಚಾಸಾ-15 ರವರು ಯಾಕೆ ಬಂದಿಲ್ಲವೆಂದು ಕೇಳಲು ಅವರು ನೀವಿಬ್ಬರು ವಾಸವಿದ್ದ ಮನೆಗೆ ಹೋಗಿ ನೋಡಿದಾಗ ಅಲ್ಲಿ ಶೇಷಪ್ಪ ಹೆಣವಾಗಿ ಬಿದ್ದಿದ್ದಾಗಿ ತಿಳಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-24 ಫ್ರಾ.ಸಾ.3 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಸದರಿ ಸ್ಥಳದಲ್ಲಿ ಆರೋಪಿಯಾದ ನೀನು ಇರಲಿಲ್ಲ ಎಂಬುದಾಗಿ ಚಾಸಾ-15 ರವರು ತಿಳಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-25 ಫ್ರಾ.ಸಾ.3 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಆಗ ಅವರು ಚಾಸಾ-15 ರವರನ್ನು ಕುರಿತು 'ಯಾವುದೇ ಗುರುತಿನ ಚೀಟಿಯನ್ನು ಪಡೆಯದೆ ಆರೋಪಿಯನ್ನು ಕೆಲಸಕ್ಕೆ ಸೇರಿಸಿಕೊಂಡಿದ್ದೀರಿ, ನಿಮ್ಮ ಎಸ್ಟೇಟಿನಲ್ಲಿ ಶೇಷಪ್ಪನ ಕೊಲೆಯಾಗಿರುವುದರಿಂದ ನಾವು ಯಾರನ್ನು ಕೇಳಬೇಕು, ನಿಮ್ಮನ್ನೇ ಆ ಬಗ್ಗೆ ಕೇಳಬೇಕಾಗುತ್ತದೆ' ಎಂದು ಕೇಳಿದಾಗ ಅವರು ಆರೋಪಿಯಾದ ನಿನ್ನ

ಬಗ್ಗೆ ದಾಖಲೆಯನ್ನು ಪೊಲೀಸರಿಗೆ ಕೊಡುತ್ತೇನೆ ಎಂದು ಹೇಳಿದ್ದಾಗಿ, ಶವಾಗಾರದಲ್ಲಿ ಪೊಲೀಸರು ಅವರನ್ನು ವಿಚಾರಿಸಿದಾಗ ಈ ಬಗ್ಗೆ ಹೇಳಿಕೆಯನ್ನು ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-26 ಫ್ರಾ.ಸಾ.3 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಿಪಿ-9 ಮತ್ತು 10 ಫೋಟೋಗಳನ್ನು ಶವಾಗಾರದಲ್ಲಿ ತೆಗೆದಿದ್ದಾಗಿ, ಅದರಲ್ಲಿ ಅವರ ಇರುವಿಕೆ ಮತ್ತು ಶೇಷಪ್ಪನ ಶವ ಕಂಡುಬರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-27 ಫ್ರಾ.ಸಾ.4-ರಮೇಶ ಇವರು ತಮ್ಮ ಸಾಕ್ಷ್ಯದಲ್ಲಿ ಈಗ್ಗೆ 4 ವರ್ಷಗಳ ಹಿಂದೆ ಒಂದು ದಿನ ರಾತ್ರಿ 8 ಗಂಟೆ ಸುಮಾರಿಗೆ ಫ್ರಾಸಾ.2 ರವರು ಅವರಿಗೆ ಫೋನ್ ಮಾಡಿ ಅವರ ಮಗ ಶೇಷಪ್ಪ ಅಲಿಯಾಸ್ ಶಶಿಯ ಕೊಲೆಯಾಗಿದೆ ಎಂದು ತಿಳಿಸಿದಾಗ ಅವರು ಹೊರಡಲು ಬಸ್ಸಿನ ಸೌಕರ್ಯ ಇಲ್ಲದಿದ್ದ ಕಾರಣ ಮಾರನೆ ದಿನ ಅವರು ಅವರ ಊರಿನಿಂದ ಹೊರಟು ಚಿಕ್ಕಮಗಳೂರಿನ ಜಿಲ್ಲಾ ಆಸ್ಪತ್ರೆಗೆ ಹೋಗಿದ್ದಾಗಿ, ಸದರಿ ಆಸ್ಪತ್ರೆಯ ಶವಗಾರದಲ್ಲಿ ಶೇಷಪ್ಪನ ಶವ ಇದ್ದುದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-28 ಫ್ರಾ.ಸಾ.4 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಶೇಷಪ್ಪನ ತಲೆ, ಮುಖ, ಕೆನ್ನೆ, ಕುತ್ತಿಗೆ ಮತ್ತು ಹೊಟ್ಟೆಯ ಭಾಗಕ್ಕೆ ಯಾವುದೋ ಆಯುಧದಿಂದ ಹೊಡೆದು ಕೊಲೆ ಮಾಡಿರುವುದು ಕಂಡುಬಂದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-29 ಫ್ರಾ.ಸಾ.4 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಆ ಬಗ್ಗೆ ಶೇಷಪ್ಪ ಕೆಲಸ ಮಾಡಿಕೊಂಡಿದ್ದ ತೋಟದ ಮಾಲೀಕರಾದ ಚಾಸಾ.14- ರಮೇಶ್ ಮತ್ತು

ಚಾಸಾ.15-ವಾಸುದೇವರವರನ್ನು ವಿಚಾರಿಸಿದಾಗ ಅವರ ತೋಟದಲ್ಲಿ ಶೇಷಪ್ಪ ಮತ್ತು ಆರೋಪಿಯಾದ ನೀನು ಒಟ್ಟಿಗೆ ಒಂದೇ ಕೂಲಿ ಲೈನ್ ಮನೆಯಲ್ಲಿ ವಾಸವಾಗಿದ್ದಾಗಿ, ಬುಧವಾರದಂದು ಕೆಲಸಕ್ಕೆ ರಜೆ ಇದ್ದುದ್ದಾಗಿ, ಗುರುವಾರ ಸಹ ನೀನು ಮತ್ತು ಶೇಷಪ್ಪ ಕೆಲಸಕ್ಕೆ ಬಾರದಿದ್ದ ಕಾರಣ ಅವರು ನಿನ್ನನ್ನು ಮತ್ತು ಶೇಷಪ್ಪನನ್ನು ಕೆಲಸಕ್ಕೆ ಬರುವಂತೆ ಕರೆಯಲು ನೀವು ವಾಸವಾಗಿದ್ದ ಮನೆಗೆ ಹೋದಾಗ ಅಲ್ಲಿ ಶೇಷಪ್ಪ ಕೊಲೆಯಾಗಿ ಬಿದ್ದಿರುವುದನ್ನು ನೋಡಿದ್ದಾಗಿ, ಆರೋಪಿಯಾದ ನೀನು ಶೇಷಪ್ಪನೊಂದಿಗೆ ಜಗಳ ಮಾಡಿಕೊಂಡು ಆತನನ್ನು ಕೊಲೆ ಮಾಡಿ ಓಡಿ ಹೋಗಿದ್ದಾಗಿ ತಿಳಿಸಿದರೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-30 ಫ್ರಾ.ಸಾ.4 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಿಪಿ.9 ಮತ್ತು ನಿಪಿ.10 ರಲ್ಲಿ ಫೋಟೋಗಳಲ್ಲಿ ಅವರ ಇರುವಿಕೆ ಹಾಗೂ ಶೇಷಪ್ಪನ ಶವ ಕಂಡುಬರುವುದಾಗಿ, ನಿಪಿ.3 ರಿಂದ ನಿಪಿ.5 ಫೋಟೋಗಳಲ್ಲಿ ಶೇಷಪ್ಪನ ಶವ ಮತ್ತು ಆತನ ಮೈ ಮೇಲೆ ಅವರು ನೋಡಿದ ಗಾಯಗಳು ಕಂಡುಬರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-31 ಫ್ರಾ.ಸಾ.4 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಚಿಕ್ಕಮಗಳೂರು ಗ್ರಾಮಾಂತರ ಪೊಲೀಸರು ಅವರನ್ನು ವಿಚಾರಿಸಿದಾಗ ಅವರು ಅವರಿಗೆ ಮೇಲಿನ ವಿಚಾರಗಳನ್ನು ತಿಳಿಸಿ ಹೇಳಿಕೆ ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-32 ಫ್ರಾ.ಸಾ.4 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಆದಾದ ಸುಮಾರು 2 ತಿಂಗಳುಗಳ ನಂತರ ಚಿಕ್ಕಮಗಳೂರು ಗ್ರಾಮಾಂತರ ಪೊಲೀಸರು ಅವರನ್ನು, ಫ್ರಾಸಾ.2-ಶಾಂತಪ್ಪ ಮತ್ತು ಚಾಸಾ.7-ಅಪ್ಪಿರವರನ್ನು ಠಾಣೆಗೆ ಕರೆಸಿ, ಶೇಷಪ್ಪನನ್ನು ಕೊಲೆ ಮಾಡಿದ್ದ ಆರೋಪಿಯಾದ ನಿನ್ನನ್ನು ದಸ್ತಗಿರಿ ಮಾಡಿರುವುದಾಗಿ ತಿಳಿಸಿದ್ದಾಗಿ, ಅವರುಗಳು ನಿನ್ನನ್ನು ನೋಡಿ ಗುರುತಿಸಿ, ಈ

ಬಗ್ಗೆ ಮತ್ತೊಂದು ಹೇಳಿಕೆ ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-33 ಪ್ರಾ.ಸಾ.5 ಮುರುಳಿ ಇವರು ತಮ್ಮ ಸಾಕ್ಷ್ಯದಲ್ಲಿ ಈಗ್ಗೆ 4 ವರ್ಷಗಳ ಹಿಂದೆ ಚಿಕ್ಕಮಗಳೂರು ಗ್ರಾಮಾಂತರ ಪೊಲೀಸರು ಕಬ್ಬಿನಹಳ್ಳಿ ಗ್ರಾಮದಲ್ಲಿರುವ ಚಾಸಾ.15 ರವರ ಕಾಫಿ ತೋಟದ ಕೂಲಿ ಲೈನ್ ಮನೆಯಲ್ಲಿ ವಾಸವಾಗಿದ್ದ ಶೇಷಪ್ಪ ರವರ ಕೊಲೆಯಾದ ಬಗ್ಗೆ ಮಹಜರು ಜರುಗಿಸಲು ಅವರಿಗೆ ನಿಪಿ.11 ರಂತೆ ನೋಟೀಸನ್ನು ನೀಡಿದ್ದಾಗಿ, ಸದರಿ ಮನೆಯೊಳಗೆ ನೆಲದ ಮೇಲೆ ಮೃತನ ಶವ ಇದ್ದ ಸ್ಥಳವನ್ನು ಪೋಲೀಸರಿಗೆ ಚಾಸಾ-15 ರವರು ತೋರಿಸಿದ ಮೇರೆಗೆ ಪೋಲಿಸರು ಅವರ, ಪ್ರಾಸಾ.1, ಮತ್ತು ಚಾಸಾ.15 ರವರ ಸಮಕ್ಷಮ ನಿಪಿ.2 ರಂತೆ ಮಹಜರನ್ನು ಬೆಳಿಗ್ಗೆ 9.15 ಗಂಟೆಯಿಂದ ಮಧ್ಯಾಹ್ನ 12 ಗಂಟೆಯವರೆಗೆ ಜರುಗಿಸಿದ್ದಾಗಿ,, ಪೊಲೀಸರು ಅಡುಗೆ ಮನೆಯ ನೆಲದ ಮೇಲೆ ಇದ್ದ ರಕ್ತವನ್ನು, ಗೋಡೆಯ ಮೇಲೆ ಚಿಮ್ಮಿದ್ದ ರಕ್ತವನ್ನು ಮತ್ತು ಗೋಡೆಯ ಮೇಲೆ ರಕ್ತವಿಲ್ಲದ ಜಾಗದಿಂದ ಸಹ ಗೋಡೆಯ ಕಣಗಳನ್ನು ಕೆರೆದು ಸಂಗ್ರಹಿಸಿದ್ದಾಗಿ, ಮೃತ ದೇಹ ಬಿದ್ದಿದ್ದ ಸ್ಥಳದಲ್ಲಿದ್ದ ರಕ್ತವನ್ನು ಪೊಲೀಸರು ಹತ್ತಿಯಿಂದ ಒರೆಸಿ ಸಂಗ್ರಹಿಸಿದ್ದಾಗಿ ನಂತರ ಪೊಲೀಸರು ರಕ್ತದ ಕಲೆಯಾಗಿದ್ದ ನೀಲಿ ಬಣ್ಣ ಮಿಶ್ರಿತ ಒಂದು ಪ್ಲಾಸ್ಟಿಕ್ ಚೀಲ, ಮೃತ ದೇಹದ ಪಕ್ಕದಲ್ಲಿ ಬಿದ್ದಿದ್ದ ಅರ್ಧ ತೋಳಿನ ಟೀ ಶರ್ಟು, ರಕ್ತದ ಕಲೆಯಾಗಿದ್ದ ಒಂದು ಬನಿಯನ್ ಮುದ್ದೆಮಾಲು-1 ರಿಂದ 7 ನ್ನು ಅವರ ವಶಕ್ಕೆ ಪಡೆದುಕೊಂಡಿದ್ದಾಗಿ, ನಿಪಿ.3 ರಿಂದ ನಿಪಿ.5 ಫೋಟೋಗಳನ್ನು ತೆಗೆದಿದ್ದು ಸದರಿ ಫೋಟೋಗಳಲ್ಲಿ ಮೃತನ ಶವ ಕಂಡುಬಂದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-34 ಪ್ರಾ.ಸಾ.5 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ ಹಾಜರುಪಡಿಸಿದ ಆರೋಪಿಯಾದ ನೀನು ಅವರ ಕೂಲಿ ಲೈನ್ ಮನೆಯಲ್ಲಿ ವಾಸವಾಗಿದ್ದು, ನೀನೆ ಶೇಷಪ್ಪನನ್ನು ಕೊಲೆ ಮಾಡಿದಾಗಿ ತಿಳಿದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-35 ಪ್ರಾ.ಸಾ.6 ಸಿದ್ದಾರ್ಥ ಇವರು ತಮ್ಮ ಸಾಕ್ಷ್ಯದಲ್ಲಿ ಕಬ್ಬಿನಹಳ್ಳಿ ಗ್ರಾಮದಲ್ಲಿ

ಚಾಸಾ.15 ರವರ ಕಾಫಿ ತೋಟದಲ್ಲಿ ಕೂಲಿ ಕೆಲಸ ಮಾಡುವವರು ವಾಸಿಸಲು ಕೂಲಿ ಲೈನ್ ಮನೆಗಳು ಇರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-36 ಫ್ರಾ.ಸಾ.6 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಆರೋಪಿಯಾದ ನೀನು ಮತ್ತು ಮೃತ ಶೇಷಪ್ಪ ಚಾಸಾ.15 ರವರ ಕಾಫಿ ತೋಟದಲ್ಲಿ ಕೆಲಸ ಮಾಡಿಕೊಂಡು ಅವರ ಎಸ್ಟೇಟಿನಲ್ಲಿರುವ ಕೂಲಿ ಲೈನ್ ಮನೆಯಲ್ಲಿ ಒಟ್ಟಿಗೆ ವಾಸವಾಗಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-37 ಫ್ರಾ.ಸಾ.6 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಸದರಿ ಕೂಲಿ ಲೈನ್ ಮನೆಯಲ್ಲಿ ಶೇಷಪ್ಪನ ಕೊಲೆಯಾಗಿದ್ದಾಗಿ, ಸದರಿ ವಿಚಾರ ಅವರಿಗೆ ಕೊಲೆಯಾದ ಮಾರನೆ ದಿನ ತಿಳಿದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-38 ಫ್ರಾ.ಸಾ.6 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ದಿಃ 19-11-2021 ರಂದು ಚಿಕ್ಕಮಗಳೂರು ಗ್ರಾಮಾಂತರ ಪೊಲೀಸರು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ಶವಗಾರಕ್ಕೆ ಬರುವಂತೆ ಅವರಿಗೆ, ಚಾಸಾ.4-ಸನತ್ ಮತ್ತು ಚಾಸಾ.6-ರಾಜು ರವರಿಗೆ ಪೊಲೀಸರು ನಿಪಿ.12 ರಂತೆ ನೋಟೀಸನ್ನು ಕೊಟ್ಟು ಸದರಿ ಆಸ್ಪತ್ರೆಯ ಶವಗಾರಕ್ಕೆ ಕರೆಸಿದ್ದಾಗಿ, ಶೇಷಪ್ಪನ ಶವವನ್ನು ಅವರು ನೋಡಿದಾಗ ಆತನ ತಲೆ ಮತ್ತು ಹೊಟ್ಟೆಯ ಮೇಲೆ ಯಾವುದೋ ಆಯುಧದಿಂದ ಕಡಿದಂತಹ ಗಾಯಗಳು ಕಂಡುಬಂದಿದ್ದಾಗಿ, ಶೇಷಪ್ಪನ ಕೊಲೆಯಾದ ಬಳಿಕ ಆರೋಪಿಯಾದ ನೀನು ಕೂಲಿ ಲೈನಿನಲ್ಲಿರದ ಕಾರಣ ನೀನೆ ಶೇಷಪ್ಪನನ್ನು ಕೊಲೆ ಮಾಡಿದ್ದಾಗಿ ಅವರು ಅಭಿಪ್ರಾಯ ಪಟ್ಟಿದ್ದಾಗಿ, ಆ ಬಗ್ಗೆ ಪೊಲೀಸರು ಮಧ್ಯಾಹ್ನ 12.15 ಗಂಟೆಯಿಂದ 2.30 ಗಂಟೆಯವರೆಗೆ ನಿಪಿ.13 ರಂತೆ ಶೇಷಪ್ಪನ ಶವ ತನಿಖೆಯನ್ನು ನಡೆಸಿ ಮಹಜರನ್ನು ಬರೆದುಕೊಂಡಿದ್ದಾಗಿ, ನಿಪಿ.9 ಮತ್ತು ಪಿ.10 ರಂತೆ ಫೋಟೋಗಳನ್ನು ತೆಗೆದಿದ್ದಾಗಿ, ಫೋಟೋಗಳಲ್ಲಿ ಶೇಷಪ್ಪನ ಶವ ಕಂಡುಬರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-39 ಫ್ರಾ.ಸಾ.7 ಚಂದ್ರಶೇಖರ್ ಕೆ.ಬಿ, ಆಗಿನ ಹಿರೇಕೊಳಲೆ ಗ್ರಾಮ ಪಂಚಾಯ್ತಿಯ ಬಿಲ್ ಕಲೆಕ್ಟರ್ ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 20-11-2021 ರಂದು ಅವರು ಸದರಿ ಗ್ರಾಮ ಪಂಚಾಯಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಚಿಕ್ಕಮಗಳೂರು ಗ್ರಾಮಾಂತರ ಪೊಲೀಸರು ಅವರ ಕಛೇರಿಗೆ ಬಂದು ಅವರ ಪಂಚಾಯಿ ಅಭಿವೃದ್ದಿ ಅಧಿಕಾರಿಗಳನ್ನು ಸಂಪರ್ಕಿಸಿ ಕಬ್ಬಿನಹಳ್ಳಿ ಗ್ರಾಮದ ರಮೇಶಗೌಡರವರ ಕಬ್ಬಿನಹಳ್ಳಿ ಎಸ್ಟೇಟ್ ಕೂಲಿ ಲೈನ್ ಮನೆಯಲ್ಲಿ ಆಗಿದ್ದ ಕೊಲೆಗೆ ಸಂಬಂಧಿಸಿದಂತೆ ಕೊಲೆಯಾದ ಸ್ಥಳದಲ್ಲಿ ಮಹಜರ್ ಜರುಗಿಸಲು ಸಾಕ್ಷಿದಾರರಾಗಿ ಸಹಕರಿಸುವಂತೆ ಅವರಿಗೆ ಮತ್ತು ಗ್ರಂಥಾಲಯದಲ್ಲಿ ಮೇಲ್ವಿಚಾರಕಾರಾಗಿ ಕೆಲಸ ಮಾಡುತ್ತಿದ್ದ ಚಾಸಾ.13 ರವರಿಗೆ ನಿಪಿ.14 ರಂತೆ ನೋಟೀಸನ್ನು ಕೊಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-40 ಫ್ರಾ.ಸಾ.7 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಆ ದಿನ ಪೊಲೀಸರು ಬಂದಿದ್ದ ಜೀಪಿನಲ್ಲಿ ಆರೋಪಿಯಾದ ನೀನು ಇದ್ದುದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-41 ಫ್ರಾ.ಸಾ.7 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಪೊಲೀಸರನ್ನು, ಅವರನ್ನು ಮತ್ತು ಚಾಸಾ.13 ರವರನ್ನು ಆರೋಪಿಯಾದ ನೀನು ಕಬ್ಬಿನಹಳ್ಳಿ ಗ್ರಾಮದ ರಮೇಶಗೌಡರವರ ಕಬ್ಬಿನಹಳ್ಳಿ ಎಸ್ಟೇಟ್ ಕೂಲಿ ಲೈನ್ ಮನೆಗೆ ಕರೆದುಕೊಂಡು ಹೋಗಿ ಅಲ್ಲಿ ಕೊಲೆಯಾಗಿದ್ದ ಸ್ಥಳವನ್ನು ತೋರಿಸಿದ್ದಾಗಿ ಕೃತ್ಯಕ್ಕೆ ಬಳಸಿದ ಮನೆಯ ಹಿಂಭಾಗದ ಸೂರಿನ ಕೆಳಭಾಗದಲ್ಲಿ ಒಂದು ಚೀಲದಲ್ಲಿ ಇಟ್ಟಿದ್ದ ಮರದ ಹಿಡಿಯಿರುವ ಕತ್ತಿ ಮುದ್ದೆಮಾಲು-8 ಮತ್ತು ಕೆಂಪು ಬಣ್ಣದ ಪ್ಲಾಸ್ಟಿಕ್ ಹಿಡಿ ಇದ್ದ ಒಂದು ಚಾಕು ಮುದ್ದೆಮಾಲು-9 ನ್ನು ತೋರಿಸಿ ಇದೇ ಕತ್ತಿಯಿಂದ ಮೃತನಿಗೆ ಹೊಡೆದಿದ್ದಾಗಿ ಮತ್ತು ಚಾಕುವಿನಿಂದ ಚುಚ್ಚಿ ಕೊಲೆ ಮಾಡಿದ್ದಾಗಿ ತಿಳಿಸಿದ್ದಾಗಿ ಹಾಗೂ ಮನೆಯ ಹಿಂಭಾಗದ ಬಚ್ಚಲು ಮನೆಯ ಬಾಗಿಲಿನ ಹಿಂಭಾಗದಲ್ಲಿ ಒಂದು ಬ್ಯಾಗಿನಲ್ಲಿಟ್ಟಿದ್ದ ರಕ್ತದ ಕಲೆಗಳಿರುವ ಬಿಸ್ಕೆಟ್ ಬಣ್ಣದ ತುಂಬು ತೋಳಿನ ಶರ್ಟು ಮುದ್ದೆಮಾಲು-10 ಮತ್ತು ಕಂದು ಬಣ್ಣದ ಪ್ಯಾಂಟ್ ಮುದ್ದೆಮಾಲು -11 ನ್ನು ನೀನು ಕೃತ್ಯವೆಸಗಿದ ಸಂದರ್ಭದಲ್ಲಿ ಧರಿಸಿದ್ದಾಗಿ ತಿಳಿಸಿ, ಪೊಲೀಸರಿಗೆ ಹಾಜರುಪಡಿಸಿದ್ದಾಗಿ ಅವುಗಳನ್ನು ಪೋಲೀಸರು ವಶಕ್ಕೆ ಪಡೆದು ಅವರು, ಚಾಸಾ.13, ಪೋಲೀಸರು ಮತ್ತು ನಿನ್ನ ಸಮಕ್ಷಮ ನಿಪಿ.15 ರಂತೆ ಮಧ್ಯಾಹ್ನ 12.30 ಗಂಟೆಯಿಂದ 2.30 ಗಂಟೆಯವರೆಗೆ ಮಹಜರು ಬರೆದು, ನಿಪಿ.16 ರಿಂದ

ನಿಪಿ.21 ರಂತೆ ಫೋಟೋಗಳನ್ನು ತೆಗೆದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-42 ಫ್ರಾ.ಸಾ.7 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಿಪಿ.16 ಮತ್ತು ನಿಪಿ. 17 ಫೋಟೋಗಳಲ್ಲಿ ಕೃತ್ಯ ನಡೆದ ಮನೆಯ ಮುಂದಿನ ಮತ್ತು ಹಿಂದಿನ ಭಾಗ, ನಿಪಿ.18 ಫೋಟೋದಲ್ಲಿ ಕೃತ್ಯ ನಡೆದ ಮನೆಯ ಹಿಂಭಾಗದಲ್ಲಿದ್ದ ಸೂರಿನ ಕೆಳಗೆ ಅಂದರೆ ಹೆಂಚಿನ ಕೆಳಗೆ ಅಂದರೆ ಹೆಂಚಿನ ಕೆಳಗೆ ಚೀಲದಲ್ಲಿ ಇರಿಸಿದ್ದ ಕತ್ತಿ ಮತ್ತು ಚಾಕುವನ್ನು ಆರೋಪಿಯಾದ ನೀನು ತೆಗೆಯುತ್ತಿರುವುದು, ನಿಪಿ.19 ಫೋಟೋದಲ್ಲಿ ಬಚ್ಚಲು ಮನೆಯ ಬಾಗಿಲಿನ ಹಿಂಭಾಗದಲ್ಲಿ ಇರಿಸಿದ್ದ ಬ್ಯಾಗಿನಲ್ಲಿದ್ದ ಶರ್ಟು ಮತ್ತು ಪ್ಯಾಂಟನ್ನು ಆರೋಪಿಯಾದ ನೀನು ತೆಗೆಯುತ್ತಿರುವುದು ಕಂಡುಬರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸೂರಿನ ಕೆಳಗೆ ಕತ್ತಿ ಮತ್ತು ಚಾಕು ಇದೆ, ಬಚ್ಚಲು ಮನೆಯ ಬಾಗಿಲಿನ ಹಿಂಭಾಗದಲ್ಲಿ ಶರ್ಟು ಮತ್ತು ಪ್ಯಾಂಟು ಇವೆ ಅವುಗಳನ್ನು ತೆಗೆದುಕೊಡಬೇಕು ಎಂದದು ಹೇಚಿದ್ದರು ನಾನು ಆಗುವುದಿಲ್ಲ ಎಂದು ಹೇಳಿದಾಗ ನನ್ನ ತಂದೆ ತಾಯಿಯನ್ನು ಕರೆದುಕೊಂಡು ಬಂದು ಜೈಲಿಗೆ ಹಾಕುತ್ತೇವೆ ಎಂದು ಹೆದರಿಸಿದರು ಹಾಗಾಗಿ ಪೋಲೀಸರು ಹೇಳಿದಂತೆ ತೆಗೆದದುಕೊಟ್ಟೆನು

ಪ್ರಶ್ನೆ-43 ಫ್ರಾ.ಸಾ.7 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಿಪಿ.20 ಮತ್ತು ನಿಪಿ.21 ರಲ್ಲಿ ಅವರ, ಚಾಸಾ-15, ಪೊಲೀಸರ ಹಾಗೂ ಆರೋಪಿಯಾದ ನಿನ್ನ ಇರುವಿಕೆ ಹಾಗೂ ನೀನು ಹಾಜರುಪಡಿಸಿದ ಮುದ್ದೆಮಾಲುಗಳು ಕಂಡುಬರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಮೇಲಿನಂತೆ ಉತ್ತರಿಸಿರುತ್ತಾರೆ

ಪ್ರಶ್ನೆ-44 ಫ್ರಾ.ಸಾ.8 ಕೆ. ರಮೇಶಗೌಡ ಇವರು ತಮ್ಮ ಸಾಕ್ಷ್ಯದಲ್ಲಿ ಕಬ್ಬಿನಹಳ್ಳಿ ಗ್ರಾಮದ ಸರ್ವೆ ನಂಬರು 212/2 ರಲ್ಲಿ ಒಟ್ಟು 24 ಎಕರೆ ಕಾಫಿ ತೋಟ ಅವರ ಹೆಸರಿಗೆ ಹೊಂದಿದ್ದಾಗಿ, ಸದರಿ ಎಸ್ಟೇಟಿನಲ್ಲಿಯೇ ಮನೆ ಕಟ್ಟಿಕೊಂಡು ಅಲ್ಲೇ ವಾಸವಾಗಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-45 ಫ್ರಾ.ಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಆರೋಪಿಯಾದ ನೀನು ಅವರಿಗೆ ಗೊತ್ತಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ನಾನು ಅವರನ್ನು ನೋಡಿದ್ದೇನೆ. ಎಸ್ಟೇಟಿನ ಮಾಲಿಕರು ಅವರೆ, ನಾನು ಅವರ ಎಸ್ಟೇಟಿನಲ್ಲಿ ಘಟನೆಯ 2 ವರ್ಷಗಳ ಹಿಂದೆ ನಾನು ಮತ್ತು ನನ್ನ ಹೆಂಡತಿ 5 ವರ್ಷಗಳ ವರೆಗೆ ಕೆಲಸ ಮಾಡಿದ್ದೆವು.

ಪ್ರಶ್ನೆ-46 ಫ್ರಾ.ಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಈಗ್ಗೆ 4 ವರ್ಷಗಳ ಹಿಂದೆ ಘಟನೆಯ ಎರಡು ವಾರಗಳ ಹಿಂದೆ ಆರೋಪಿಯಾದ ನೀನು ಮತ್ತು ಮೃತ ಶೇಷಪ್ಪ ಅಲಿಯಾಸ್ ಶೇಷಿ ಒಟ್ಟಿಗೆ ಅವರ ಎಸ್ಟೇಟಿಗೆ ಕೂಲಿ ಕೆಲಸಕ್ಕೆ ಬಂದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-47 ಫ್ರಾ.ಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಚಾಸಾ.16-ಚೇತನ್ ರವರು ಅವರ ಎಸ್ಟೇಟಿನ ಮ್ಯಾನೇಜರ್ ಮತ್ತು ರೈಟರ್ ಆಗಿ ಕೆಲಸ ಮಾಡಿಕೊಂಡಿದ್ದಾಗಿ, ಆರೋಪಿಯಾದ ನೀನು ಮತ್ತು ಶೇಷಪ್ಪನಿಗೆ ಅವರ ಎಸ್ಟೇಟಿನಲ್ಲಿ ಉಳಿದುಕೊಳ್ಳಲು ಚಾಸಾ.16 ರವರ ಮನೆಯಿಂದ ಸ್ವಲ್ಪ ಕೆಳಗೆ ಇದ್ದ ಒಂದು ಕೂಲಿಲೈನ್ ಮನೆಯನ್ನು ಕೊಟ್ಟಿದ್ದಾಗಿ, ನೀವಿಬ್ಬರು ಒಟ್ಟಿಗೆ ವಾಸವಾಗಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು, ಚೇತನ್ ಯಾರೆಂದು ನನಗೆ ಗೊತ್ತಿಲ್ಲ.

ಪ್ರಶ್ನೆ-48 ಫ್ರಾ.ಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಆರೋಪಿಯಾದ ನೀನು ಮತ್ತು ಶೇಷಪ್ಪ ಮುಂಗಡ ಹಣವನ್ನು ಕೇಳಿದ್ದರಿಂದ ಅವರು ಒಪ್ಪಿ ಅವರಿಗೆ ರೂ.3,000/- ಹಣವನ್ನು ಮುಂಗಡವಾಗಿ ಕೊಟ್ಟಿದ್ದಾಗಿ, ಚಾಸಾ.16 ರವರೊಂದಿಗೆ ಅವರಿಗೆ ಉಳಿದುಕೊಳ್ಳಲು ನೀಡಲಾಗಿದ್ದ ಮನೆಯ ಕೀಯನ್ನು ಕೊಟ್ಟು ಕಳುಹಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-49 ಫ್ರಾ.ಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಘಟನೆಯ ದಿನ ಬುಧವಾರದಂದು ಆರೋಪಿಯಾದ ನಿನಗೆ ಮತ್ತು ಶೇಷಪ್ಪನಿಗೆ ಬಟವಾಡೆ ಮಾಡಿ ಹಣವನ್ನು ನೀಡಿ ರಜೆ ಕೊಟ್ಟಿದ್ದಾಗಿ, ನಿನಗೆ ಮತ್ತು ಶೇಷಪ್ಪ ನಿಗೆ ಒಟ್ಟಿಗೆ

ಕೆಲಸ ಮಾಡಿದ್ದರಿಂದ ಇಬ್ಬರಿಗೂ ಸೇರಿಸಿ ರೂ.1,800/- ಗಳನ್ನು ಶೇಷಪ್ಪನಿಗೆ ಕೊಟ್ಟು ಕಳುಹಿಸಿ ನಂತರ ಅವರು ತೋಟದ ಮನೆಯಲ್ಲಿಯೇ ಇದ್ದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-50 ಫಾ.ಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅದೇ ದಿನ ಸಂಜೆ ಸುಮಾರು 5 ಗಂಟೆಯಿಂದ 5.30 ಗಂಟೆಗೆ ಆರೋಪಿಯಾದ ನೀನು ಅವರ ಮನೆಗೆ ಬಂದು, ನಿನ್ನ ಅತ್ತೆ ಬಂದಿದ್ದಾಗಿ, ಬೆಳಿಗ್ಗೆ ಕೊಟ್ಟ ಹಣ ರೇಷನ್ ತಂದು ಖರ್ಚಾಗಿದೆ, ಇನ್ನೂ ಸಾವಿರ ರೂಪಾಯಿ ಕೊಡಿ ಎಂದು ಕೇಳಿದಾಗ ಅವರು ರೂ.500/- ಕೊಟ್ಟು ಕಳುಹಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-51 ಫಾ.ಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಮಾರನೆ ದಿನ ಆರೋಪಿಯಾದ ನೀನು ಮತ್ತು ಶೇಷಪ್ಪ ಕೆಲಸಕ್ಕೆ ಬಾರದಿದ್ದರಿಂದ ಆ ವಿಚಾರವನ್ನು ಚಾಸಾ.16 ರವರು ಅವರಿಗೆ ತಿಳಿಸಿದ್ದಾಗಿ, ಸಂಜೆಯವರೆಗೂ ನೀವು ಕೆಲಸಕ್ಕೆ ಬಾರದಿದ್ದಾಗ ಏನಾಗಿದೆ ಎಂದು ಹೋಗಿ ನೋಡು ಎಂದು ಚಾಸಾ.16 ರವರನ್ನು ಅವರು ಉಳಿದುಕೊಂಡಿದ್ದ ಕೂಲಿಲೈನ್ ಮನೆಗೆ ಕಳುಹಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-52 ಫಾ.ಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಚಾಸಾ.16 ರವರು ನೀನು ಮತ್ತು ಶೇಷಪ್ಪ ಉಳಿದುಕೊಂಡಿದ್ದ ಕೂಲಿ ಲೈನ್ ಮನೆಯ ಹತ್ತಿರ ಹೋಗಿ ನೋಡಿದಾಗ ಮನೆಯ ಬಾಗಿಲು ಹಾಕಿದ್ದರಿಂದ ಕಿಟಕಿಯಿಂದ ನೋಡಿದಾಗ ಅಲ್ಲಿ ಯಾವುದೋ ಶವವನ್ನು ಬಟ್ಟೆಯಿಂದ ಮುಚ್ಚಿರುವುದು ಹಾಗೂ ಸುತ್ತಮುತ್ತ ರಕ್ತ ಹರಿದಿರುವುದು ಕಂಡುಬಂದಿದ್ದಾಗಿ ಚಾಸಾ.16 ರವರು ಅವರಿಗೆ ತಿಳಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-53 ಫಾ.ಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಂತರ ಅವರು ಮತ್ತು ಅವರ ಮಗನಾದ ಚಾಸಾ.15-ವಾಸುದೇವರವರು ಆರೋಪಿಯಾದ ನೀನು ಮತ್ತು ಶೇಷಪ್ಪ ಉಳಿದುಕೊಂಡಿದ್ದ ಕೂಲಿಲೈನ್ ಮನೆಯ ಹತ್ತಿರ ಹೋಗಿ

ಕಿಟಕಿಯಿಂದ ನೋಡಿದಾಗ ಮೇಲೆ ಹೇಳಿದಂತೆ ಯಾವುದೋ ಶವವನ್ನು ಬಟ್ಟೆಯಿಂದ ಮುಚ್ಚಿರುವುದು, ಸುತ್ತಮುತ್ತ ರಕ್ತ ಹರಿದಿರುವುದು ಕಂಡುಬಂದಿದ್ದಾಗಿ, ಅವರು ಮತ್ತು ಅವರ ಮಗ ಚಾಸಾ.15 ಕೂಡಲೇ ಚಿಕ್ಕಮಗಳೂರು ಗ್ರಾಮಾಂತರ ಪೊಲೀಸರಿಗೆ ಫೋನ್ ಮಾಡಿ ವಿಷಯ ತಿಳಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-54 ಫ್ರಾ.ಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಂತರ ಸಂಜೆ 6 ರಿಂದ 6.30 ಗಂಟೆ ಸುಮಾರಿಗೆ ಪೊಲೀಸರು ಅಲ್ಲಿಗೆ ಬಂದು ಆರೋಪಿಯಾದ ನೀನು ಮತ್ತು ಶೇಷಪ್ಪ ವಾಸವಾಗಿದ್ದ ನಿಪಿ.16 ಮತ್ತು ನಿಪಿ.17 ಫೋಟೋದಲ್ಲಿ ಕಂಡುಬರುವ ಕೂಲಿ ಲೈನ್ ಮನೆಯ ಬಾಗಿಲನ್ನು ತೆಗೆದಿದ್ದಾಗಿ, ನಂತರ ಪೊಲೀಸರು ಮತ್ತು ಅವರು ಒಳಗೆ ಹೋಗಿ ನೋಡಿದಾಗ ಕೊಲೆಯಾಗಿದ್ದ ವ್ಯಕ್ತಿ ಶೇಷಪ್ಪ ಎಂದು ತಿಳಿದಿದ್ದಾಗಿ, ಆ ಸಮಯದಲ್ಲಿ ಆರೋಪಿ ಅಲ್ಲಿ ಇರಲಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-55 ಫ್ರಾ.ಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಪೊಲೀಸರು ಶೇಷಪ್ಪನ ಪ್ಯಾಂಟಿನ ಜೇಬಿನಲ್ಲಿದ್ದ ಒಂದು ಆಧಾರ್ ಕಾರ್ಡನ್ನು ತೆಗೆದು ಅದರಲ್ಲಿದ್ದ ವಿಳಾಸದ ಮೇರೆಗೆ ಶೇಷಪ್ಪನ ತಂದೆಯ ಮಾಹಿತಿಯನ್ನು ಪಡೆದು ಘಟನೆಯ ಬಗ್ಗೆ ಅವರಿಗೆ ಮಾಹಿತಿಯನು ಕೊಟ್ಟಿದ್ದಾಗಿ, ನಂತರ ಪೊಲೀಸರು ಶೇಷಪ್ಪನ ಶವವನ್ನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ಶವಗಾರಕ್ಕೆ ಸಾಗಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-56 ಫ್ರಾ.ಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ತೋಟದಲ್ಲಿ ಕೆಲಸ ಮಾಡಲು ಬೇಕಾಗುವ ಕತ್ತಿ ಮತ್ತು ಗುದ್ದಲಿಗಳನ್ನು ಅವರೇ ಖರೀದಿಸಿ ಪ್ರತಿ ಕೂಲಿ ಕಾರ್ಮಿಕರಿಗೆ ಕೊಡುತ್ತಿದ್ದುದಾಗಿ, ಅದೇ ರೀತಿ ಆರೋಪಿಯಾದ ನಿನಗೆ ಮತ್ತು ಶೇಷಪ್ಪನಿಗೂ ಸಹ ಕತ್ತಿ ಮತ್ತು ಗುದ್ದಲಿಗಳನ್ನು ಕೊಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-57 ಫ್ರಾ.ಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಹಿಂದಿನ ದಿನ ಅಂದರೆ ಅವರು ಬಟವಾಡೆ ಮಾಡಿದ ದಿನ ಆರೋಪಿಯಾದ ನೀನು ಮತ್ತು ಶೇಷಪ್ಪ ಮದ್ಯಪಾನ ಮಾಡಿ ಗಲಾಟೆ ಮಾಡಿಕೊಳ್ಳುತ್ತಿದ್ದುದ್ದಾಗಿ, ಅದನ್ನು ನೋಡಿದ ಚಾಸಾ.16 ರವರು ನೀವು ಗಲಾಟೆ ಮಾಡಿಕೊಳ್ಳುತ್ತಿದ್ದರೆ ಅದನ್ನು ಮಾಲೀಕರಿಗೆ ತಿಳಿಸುವುದಾಗಿ ನಿಮಗೆ ಹೇಳಿ ವಾರ್ನಿಂಗ್ ಕೊಟ್ಟಿದ್ದಾಗಿ ಚಾಸಾ.16 ರವರು ಅವರಿಗೆ ತಿಳಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-58 ಫ್ರಾ.ಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಶೇಷಪ್ಪನ ತಂದೆ ಪೊಲೀಸರಿಗೆ ನಿಪಿ.1 ರಂತೆ ದೂರು ಕೊಟ್ಟ ವಿಚಾರ ತಿಳಿದಿದ್ದಾಗಿ, ನಂತರ ಪೊಲೀಸರು ಅವರನ್ನು ಎರಡು ಬಾರಿ ವಿಚಾರಿಸಿ ಅವರ ಹೇಳಿಕೆಗಳನ್ನು ಪಡೆದುಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-59 ಫ್ರಾ.ಸಾ.9 ವಾಸುದೇವ್ ಇವರು ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನಿನ್ನನ್ನು ಅವರು ಈ ಹಿಂದೆ ನೋಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ವಾಸುದೇರ್ ಅವರು ನನಗೆ ಗೊತ್ತು. ಅತ ರಮೇಶ್ ಗೌಡ ರವರ ಮಗ

ಪ್ರಶ್ನೆ-60 ಫ್ರಾ.ಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಮೃತ ಶೇಷಪ್ಪ ಅಲಿಯಾಸ್ ಶಶಿ ಅಲಿಯಾಸ್ ಶಶಿಕುಮಾರ ಗೊತ್ತಿದಾಗಿ, ಶೇಷಪ್ಪ ಮತ್ತು ಆರೋಪಿಯಾದ ನೀನು ಒಟ್ಟಿಗೆ ಅವರ ಎಸ್ಟೇಟಿಗೆ ಕೂಲಿ ಕೆಲಸಕ್ಕೆಂದು ಬಂದಿದ್ದಾಗಿ, ಚಾಸಾ.16 ಅವರು ಅವರ ಎಸ್ಟೇಟಿನಲ್ಲಿ ರೈಟರ್ ಆಗಿ ಕೆಲಸ ಮಾಡಿಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-61 ಫ್ರಾ.ಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಕಬ್ಬಿನಹಳ್ಳಿ ಗ್ರಾಮದಲ್ಲಿ ಅವರಿಗೆ ಮತ್ತು ಅವರ ತಂದೆಗೆ ಸೇರಿದ ಒಟ್ಟು 24 ಎಕರೆ ಜಮೀನು ಇದ್ದುದ್ದಾಗಿ, ಸರ್ವೆ ನಂಬರು 212/2 ರಲ್ಲಿ ಸುಮಾರು 2 ಎಕರೆಯಲ್ಲಿ ಅವರಿಗೆ ಸೇರಿದ ಕಾಫಿ ಎಸ್ಟೇಟ್ ಇದ್ದುದ್ದಾಗಿ, ಸದರಿ ಎಸ್ಟೇಟಿನಲ್ಲಿ ಕೂಲಿ ಕಾರ್ಮಿಕರು

ಉಳಿದುಕೊಳ್ಳಲೆಂದು ಕೂಲಿ ಲೈನ್ ಮನೆಗಳಿರುವುದಾಗಿ, ಸದರಿ ಎಸ್ಟೇಟಿನಲ್ಲಿರುವ ಅವರ ವಾಸದ ಮನೆಯಲ್ಲಿ ಅವರ ತಂದೆ ತಾಯಿ ಮತ್ತು ಅವರು ಕುಟುಂಬದೊಂದಿಗೆ ವಾಸವಾಗಿದ್ದಾಗಿ, ಅವರ ಮನೆಯಿಂದ ಮೇಲ್ಭಾಗದಲ್ಲಿ ಸುಮಾರು 4 ರಿಂದ 5 ಕೂಲಿ ಲೈನ್ ಮನೆಗಳಿವೆ ಮತ್ತು ಕೆಳಭಾಗದಲ್ಲಿ 3 ಕೂಲಿ ಲೈನ್ ಮನೆಗಳಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-62 ಪ್ರಾ.ಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು 2021 ನೇ ಇಸವಿ ನವೆಂಬರ್ ತಿಂಗಳಿನಲ್ಲಿ ಘಟನೆಯ ಎರಡು ವಾರಗಳ ಹಿಂದೆ ಆರೋಪಿಯಾದ ನೀನು ಮತ್ತು ಮೃತ ಶೇಷಪ್ಪ ಅಲಿಯಾಸ್ ಶಶಿರವರು ಒಟ್ಟಿಗೆ ಅವರ ಎಸ್ಟೇಟಿಗೆ ಕೂಲಿ ಕೆಲಸಕ್ಕೆ ಬಂದಿದ್ದಾಗಿ, ನಿಮಗೆ ಅವರು ಕೆಲಸವನ್ನು ಕೊಟ್ಟು, ಅವರ ಮನೆಯಿಂದ ಕೆಳಭಾಗದಲ್ಲಿರುವ ಕೂಲಿ ಲೈನಿನ ಎರಡು ರೂಮುಗಳಿರುವ ಮೊದಲನೆ ಮನೆಯನ್ನು ಅವರಿಗೆ ಉಳಿದುಕೊಳ್ಳಲು ಕೊಟ್ಟ ಮೇರೆಗೆ ನೀನು ಮತ್ತು ಮೃತ ಶೇಷಪ್ಪ ಸದರಿ ಮನೆಯಲ್ಲೇ ಒಟ್ಟಿಗೆ ಉಳಿದುಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-63 ಪ್ರಾ.ಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅವರ ಎಸ್ಟೇಟಿನಲ್ಲಿ ಕೆಲಸಕ್ಕೆ ಇರುವವರೆಲ್ಲರೂ ತಾತ್ಕಾಲಿಕ ಕೆಲಸಗಾರರಾಗಿದ್ದಾಗಿ, ಅದೇ ರೀತಿ ಆರೋಪಿಯಾದ ನೀನು ಮತ್ತು ಮೃತ ಶೇಷಪ್ಪ ಸಹ ತಾತ್ಕಾಲಿಕ ಕೆಲಸಗಾರರಾಗಿದ್ದಾಗಿ, ಅವರ ಎಸ್ಟೇಟಿನಲ್ಲಿ ಕೆಲಸ ಮಾಡುವ ಎಲ್ಲಾ ಕೆಲಸಗಾರರ ಹಾಜರಾತಿಯನ್ನು ನಿರ್ವಹಿಸುತ್ತಿದ್ದು, ಅವರ ಎಸ್ಟೇಟಿನ ಮ್ಯಾನೇಜರ್ ಮತ್ತು ರೈಟರ್ ಆದ ಚಾಸಾ.16-ಚೇತನ್ ರವರು ನಿರ್ವಹಿಸುವುದಾಗಿ, ಸದರಿ ಹಾಜರಾತಿ ವಹಿಯಲ್ಲಿ ನಿನ್ನ ಮತ್ತು ಮೃತನ ಹೆಸರನ್ನು ಸೇರಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-64 ಪ್ರಾ.ಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಪ್ರತಿ ಬುಧವಾರದಂದು ಎಸ್ಟೇಟಿನ ಕೂಲಿ ಕೆಲಸಗಾರರಿಗೆ ಬಟವಾಡೆಯನ್ನು ಮಾಡುತ್ತಿದ್ದುದಾಗಿ, ದಿಃ 17-11-2021 ರಂದು ಆರೋಪಿಯಾದ ನಿನಗೆ ಮತ್ತು ಮೃತನಿಗೆ ಕೊನೆಯ ಬಾರಿಗೆ ಬಟವಾಡೆಯನ್ನು ಮಾಡಿದ್ದಾಗಿ, ಅವರ ತಂದೆಯಾದ ಪ್ರಾಸಾ.8-ರಮೇಶ್ ಗೌಡ ರವರು ಆ ದಿನ ಬಟವಾಡೆ ಮಾಡಿ ಹಣವನ್ನು ನಿನಗೆ ಮತ್ತು

ಮೃತನಿಗೆ ಕೊಟ್ಟಿದ್ದಾಗಿ, ಬಟವಾಡೆಯಾದ ಬಳಿಕ ನೀವಿಬ್ಬರು ಸಂತೆಗೆ ಹೋಗಿದ್ದು, ಅವರು ಮತ್ತು ಪ್ರಾಸಾ.8 ರವರು ಮನೆಯಲ್ಲಿಯೇ ಇದ್ದುದ್ದಾಗಿ ಸಾಕ್ಷ್ಯನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-65 ಪ್ರಾ.ಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಮಾರನೆ ದಿನ ಅಂದರೆ ದಿಃ 18-11-2021 ರಂದು ಬೆಳಿಗ್ಗೆ ಆರೋಪಿಯಾದ ನೀನು ಮತ್ತು ಮೃತ ಕೆಲಸಕ್ಕೆ ಬಂದಿಲ್ಲವೆಂದು ಚಾಸಾ.16 ರವರು ಅವರಿಗೆ ತಿಳಿಸಿದ್ದಾಗಿ, ಸಂಜೆಯವರೆಗೂ ಅವರು ಕೆಲಸಕ್ಕೆ ಬಾರದಿದ್ದಾಗ ಏನಾಗಿದೆ ಹೋಗಿ ನೋಡಿಕೊಂಡು ಬನ್ನಿ ಎಂದು ಅವರು ಚಾಸಾ.16 ರವರನ್ನು ನೀವು ಉಳಿದುಕೊಂಡಿದ್ದ ಕೂಲಿಲೈನ್ ಮನೆಗೆ ಕಳುಹಿಸಿದಾಗ ಚಾಸಾ.16 ರವರು ನೀವಿಬ್ಬರು ಉಳಿದುಕೊಂಡಿದ್ದ ಸದರಿ ಮನೆಯ ಹತ್ತಿರ ಹೋಗಿ ನೋಡಿದಾಗ ಮನೆಯ ಬಾಗಿಲು ಹಾಕಿದ್ದಾಗಿ, ಅವರು ಕಿಟಕಿಯಿಂದ ನೋಡಿದಾಗ ಅಲ್ಲಿ ಯಾರೋ ಹೊದಿಕೆಯನ್ನು ಹೊದ್ದುಕೊಂಡು ಮಲಗಿದಂತೆ ಕಾಣುತ್ತಿದ್ದುದ್ದಾಗಿ, ಗೋಡೆ ಮತ್ತು ನೆಲದ ಮೇಲೆ ರಕ್ತ ಹರಿದಿರುವುದು ಕಂಡುಬಂದಿದ್ದಾಗಿ ಚಾಸಾ.16 ರವರು ಅವರಿಗೆ ತಿಳಿಸಿದ್ದಾಗಿ ಸಾಕ್ಷ್ಯನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-66 ಪ್ರಾ.ಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಂತರ ಅವರು ಮತ್ತು ಪ್ರಾಸಾ.8 ರವರು ಆರೋಪಿಯಾದ ನೀನು ಮತ್ತು ಮೃತ ಶೇಷಪ್ಪ ಉಳಿದುಕೊಂಡಿದ್ದ ಕೂಲಿ ಲೈನ್ ಮನೆಯ ಹತ್ತಿರ ಹೋಗಿದ್ದಾಗಿ ಆ ಸಮಯದಲ್ಲಿ ಸ್ವಲ್ಪ ಕತ್ತಲೆ ಇದ್ದ ಕಾರಣ ಅವರು ಮೊಬೈಲ್ ಟಾರ್ಚನ್ನು ಆನ್ ಮಾಡಿಕೊಂಡು ಕಿಟಕಿಯಿಂದ ನೋಡಿದಾಗ ಯಾರೋ ಸತ್ತಿರುವಂತೆ ಕಂಡುಬಂದಿದ್ದಾಗಿ, ಅವರ ಮೇಲೆ ರಗ್ಗನ್ನು ಮುಚ್ಚಿರುವುದು, ಗೋಡೆ ಮತ್ತು ನೆಲದ ಮೇಲೆ ರಕ್ತ ಇರುವುದು ಕಂಡುಬಂದಿದ್ದಾಗಿ. ನಂತರ ಅವರು ಕೂಡಲೇ ಚಿಕ್ಕಮಗಳೂರು ಗ್ರಾಮಾಂತರ ಪೊಲೀಸರಿಗೆ ಫೋನ್ ಮಾಡಿ ವಿಷಯ ತಿಳಿಸಿದ್ದಾಗಿ ಸಾಕ್ಷ್ಯನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-67 ಪ್ರಾ.ಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಂತರ ಸಂಜೆ ಸುಮಾರು 7 ರಿಂದ 7.30 ಗಂಟೆ ಸುಮಾರಿಗೆ ಪೊಲೀಸರು ಅಲ್ಲಿಗೆ ಬಂದು ಆರೋಪಿಯಾದ ನೀನು ಮತ್ತು ಶೇಷಪ್ಪ ವಾಸವಾಗಿದ್ದ ಮನೆಯ ಬಾಗಿಲನ್ನು ತೆಗೆದಿದ್ದಾಗಿ, ನಂತರ ಪೊಲೀಸರು ಮತ್ತು ಅವರು ಮನೆಯ ಒಳಗೆ

ಹೋಗಿದ್ದಾಗಿ, ಮನೆಯ ಮೊದಲನೆಯ ರೂಮಿನಲ್ಲಿದ್ದ ವ್ಯಕ್ತಿಯ ಮೇಲೆ ಇದ್ದ ಹೊದಿಕೆಯನ್ನು ಪೊಲೀಸರು ತೆಗೆದಾಗ ಆತ ಶೇಷಪ್ಪ ಎಂದು ತಿಳಿದಿದ್ದಾಗಿ, ಆತ ಮೃತಪಟ್ಟಿರುವುದು ಕಂಡುಬಂದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-68 ಫ್ರಾ.ಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಆ ಸಮಯದಲ್ಲಿ ಆರೋಪಿಯಾದ ನೀನು ಅಲ್ಲಿ ಇರಲಿಲ್ಲವೆಂದು ಸಾಕ್ಷ್ಯನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-69 ಫ್ರಾ.ಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಶೇಷಪ್ಪನ ಶವದ ಮೇಲೆ ಸುಮಾರು ಕಡೆ ಕತ್ತಿಯಿಂದ ಚುಚ್ಚಿರುವುದು ಮತ್ತು ಕೊಚ್ಚಿರುವುದು ಕಂಡುಬಂದಿದ್ದಾಗಿ ಸಾಕ್ಷ್ಯನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-70 ಫ್ರಾ.ಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಪೊಲೀಸರು ಶೇಷಪ್ಪನ ಪ್ಯಾಂಟಿನ ಜೇಬಿನಲ್ಲಿದ್ದ ಒಂದು ಆಧಾರ ಕಾರ್ಡ್ ಮತ್ತು ಚೀಟಿಗಳನ್ನು ತೆಗೆದಿದ್ದು, ಚೀಟಿಯಲ್ಲಿದ್ದ ಶೇಷಪ್ಪನ ತಂದೆಯ ಮೊಬೈಲ್ ನಂಬರನ್ನು ಪೊಲೀಸರು ತೆಗೆದುಕೊಟ್ಟಿದ್ದಾಗಿ, ಅವರು ಸದರಿ ನಂಬರಿಗೆ ಕರೆ ಮಾಡಿ ಮಾಹಿತಿಯನ್ನು ಕೊಟ್ಟಾಗ 'ಅವರು ಹಾನಬಾಳಿನ ಒಂದು ತೋಟದಲ್ಲಿ ಕೆಲಸಕ್ಕೆ ಇರುವುದಾಗಿ ತಿಳಿಸಿ, ಈಗ ಬಸ್ ಸಿಗುವುದಿಲ್ಲ ಬೆಳಿಗ್ಗೆ ಬರುತ್ತೇನೆ' ಎಂದು ತಿಳಿಸಿದ್ದಾಗಿ, ನಂತರ ಪೊಲೀಸರು ಶೇಷಪ್ಪನ ಶವವನ್ನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ಶವಗಾರಕ್ಕೆ ಸಾಗಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-71 ಫ್ರಾ.ಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಬಟವಾಡೆ ಮಾಡಿದ ದಿನ ಅಂದರೆ ದಿಃ 17-11-2021 ರಂದು ಆರೋಪಿಯಾದ ನೀನು ಮತ್ತು ಶೇಷಪ್ಪ ಅಲಿಯಾಸ್ ಶಶಿಕುಮಾರ ಮದ್ಯಪಾನ ಮಾಡಿ ಗಲಾಟೆ ಮಾಡಿಕೊಳ್ಳುತ್ತಿದ್ದುದ್ದಾಗಿ, ಅದನ್ನು ನೋಡಿದ ಚಾಸಾ.16 ರವರು 'ನೀವು ಹೀಗೆ ಗಲಾಟೆ ಮಾಡಿಕೊಳ್ಳುತ್ತಿದ್ದರೆ ನಾನು ಅದನ್ನು ಮಾಲೀಕರಿಗೆ ತಿಳಿಸುವುದಾಗಿ ಅವರಿಗೆ ಹೇಳಿ ವಾರ್ನಿಂಗ್ ಕೊಟ್ಟಿದ್ದಾಗಿ' ಚಾಸಾ.16 ರವರು

ಅವರಿಗೆ ಆ ದಿನ ಸಂಜೆ ತಿಳಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-72 ಫ್ರಾ.ಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅದೇ ದಿನ ಅಂದರೆ ದಿಃ 17-11-2021 ರಂದು ಸಂಜೆ ಸುಮಾರು 5 ಗಂಟೆ ಸುಮಾರಿಗೆ ಆರೋಪಿಯಾದ ನೀನು ಅವರ ಮನೆಗೆ ಬಂದು, ನಿನ್ನ ಅತ್ತೆ ಬಂದಿದ್ದಾಗಿ, ಅವರನ್ನು ವಾಪಸ್ ಕಳುಹಿಸಬೇಕು ಎಂದು ಹೇಳಿ ಅವರ ತಂದೆಯಿಂದ ರೂ.500/- ಪಡೆದುಕೊಂಡು ಹೋಗಿದ್ದಾಗಿ ಅವರ ತಂದೆ ಅವರಿಗೆ ತಿಳಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-73 ಫ್ರಾ.ಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ದಿಃ 19-11-2021 ರಂದು ಬೆಳಿಗ್ಗೆ 9 ಗಂಟೆಗೆ ಪೊಲೀಸರು ಶೇಷಪ್ಪನ ಕೊಲೆಯಾಗಿದ್ದ ಸ್ಥಳಕ್ಕೆ ಮಹಜರು ಮಾಡಲು ಬಂದಾಗ ಅವರು, ಚಾಸಾ.16 ಇದ್ದುದ್ದಾಗಿ, ಸಾಕ್ಷಿದಾರರಾಗಿ ಫ್ರಾಸಾ.1 ಮತ್ತು ಫ್ರಾಸಾ.5 ರವರನ್ನು ಪೊಲೀಸರು ಕರೆಸಿ ಅವರುಗಳ ಸಮಕ್ಷಮ ಅವರು ಪೊಲೀಸರಿಗೆ ಕೃತ್ಯ ನಡೆದ ಸ್ಥಳವನ್ನು ತೋರಿಸಿದ್ದಾಗಿ, ನೀನು ಮತ್ತು ಶೇಷಪ್ಪ ವಾಸವಾಗಿದ್ದ ಕೂಲಿ ಲೈನ್ ಮನೆಯ ಅಡುಗೆ ಮನೆಯ ಗೋಡೆಯ ಮೇಲಿದ್ದ ರಕ್ತದ ಕಲೆಗಳನ್ನು, ಮೃತ ದೇಹವಿದ್ದ ಸ್ಥಳದ ನೆಲದ ಮೇಲೆ ಮತ್ತು ಗೋಡೆಯ ಮೇಲಿದ್ದ ರಕ್ತದ ಕಲೆಗಳನ್ನು ಹಾಗೂ ಗೋಡೆಯ ಮೇಲೆ ರಕ್ತವಿಲ್ಲದ ಸ್ಥಳದಲ್ಲಿದ್ದ ಗೋಡೆಯ ಕಣಗಳನ್ನು ಪೊಲೀಸರು ಕೆರೆದು ಸಂಗ್ರಹಿಸಿದ್ದಾಗಿ, ಶವ ಬಿದ್ದಿದ್ದ ಸ್ಥಳ ಮತ್ತು ಅಡುಗೆ ಕೋಣೆಯ ಮಧ್ಯದಲ್ಲಿ ಒಂದು ನೀಲಿ ಬಣ್ಣದ ಹರಿದಿರುವ ಪ್ಲಾಸ್ಟಿಕ್ ಚೀಲದ ಮೇಲೆ ರಕ್ತದ ಕಲೆಗಳು ಇದ್ದುದ್ದಾಗಿ ಅದನ್ನೂ ಸಹ ಪೊಲೀಸರು ಅವರ ವಶಕ್ಕೆ ತೆಗೆದುಕೊಂಡಿದ್ದಾಗಿ, ಶವ ಬಿದ್ದಿದ್ದ ಕೋಣೆಯಲ್ಲಿ ಒಂದು ಅರ್ಧ ತೋಳಿನ ಟೀ ಶರ್ಟ್ ಮತ್ತು ಸಿಮೆಂಟ್ ಬಣ್ಣದ ಒಂದು ಬನಿಯನ್ ಗೆ ರಕ್ತದ ಕಲೆಗಳಾಗಿದ್ದು ಅವುಗಳನ್ನು ಸಹ ಪೊಲೀಸರು ತಮ್ಮ ವಶಕ್ಕೆ ತೆಗೆದುಕೊಂಡಿದ್ದಾಗಿ, ಆ ಬಗ್ಗೆ ಬೆಳಿಗ್ಗೆ ಸುಮಾರು 9 ಗಂಟೆಯಿಂದ ಮಧ್ಯಾಹ್ನ 12 ರಿಂದ 12.30 ಗಂಟೆಯವರೆಗೆ ನಿಪಿ.2 ರಂತೆ ಮಹಜರು ಬರೆದು, ನಿಪಿ.3 ರಿಂದ 5 ರಂತೆ ಫೋಟೋಗಳನ್ನು ತೆಗೆದಿದ್ದಾಗಿ, ಸದರಿ ಫೋಟೋಗಳಲ್ಲಿ ನೀನು ಮತ್ತು ಶೇಷಪ್ಪ ವಾಸವಾಗಿದ್ದ ಅವರ ಕೂಲಿ ಲೈನ್ ಮನೆ, ಶೇಷಪ್ಪ ಕೊಲೆಯಾಗಿದ್ದ ಸ್ಥಳ, ಆತನ ಶವ ಮತ್ತು ಆತನಿಗಾದ ಗಾಯಗಳು ಕಂಡುಬರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ-74 ಫ್ರಾ.ಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಿಪಿ.16 ಮತ್ತು ನಿಪಿ.17 ಫೋಟೋಗಳಲ್ಲಿ ಅವರ ಎಸ್ಟೇಟಿನ ಕೂಲಿ ಲೈನ್ ಮನೆಯಲ್ಲಿ ಇದ್ದು, ಅದರಲ್ಲಿ ಆರೋಪಿಯಾದ ಮತ್ತು ಶೇಷಪ್ಪ ಒಟ್ಟಿಗೆ ವಾಸವಾಗಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-75 ಫ್ರಾ.ಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಿಪಿ-2 ಮಹಜರು ಸಮಯದಲ್ಲಿ ಪೊಲೀಸರು ಅಮಾನತುಪಡಿಸಿಕೊಂಡ ವಸ್ತುಗಳ ಮು.ಮಾ-1 ರಿಂದ 7 ಆಗಿರುತ್ತವೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-76 ಫ್ರಾ.ಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ದಿಃ 20-11-2021 ರಂದು ಪೊಲೀಸರು ಅವರನ್ನು ಅವರ ಠಾಣೆಗೆ ಕರೆಸಿ ವಿಚಾರಿಸಿದಾಗ ಅವರು ಅವರಿಗೆ ನಡೆದ ವಿಚಾರವನ್ನು ತಿಳಿಸಿ ಹೇಳಿಕೆ ಕೊಟ್ಟಿದ್ದಾಗಿ, ಅದೇ ದಿನ ಅವರ ಎಸ್ಟೇಟಿನ ಕೂಲಿ ಕೆಲಸಗಾರರಿಗೆ ನಿರ್ವಹಿಸುವ 2021 ನೇ ಇಸವಿ ನವೆಂಬರ್ ತಿಂಗಳಿನ ಹಾಜರಾತಿ ವಹಿ ನಿಪಿ.22 ನ್ನು ಅವರ ತಂದೆಯ ಪರವಾಗಿ ಅವರು ದೃಢೀಕರಿಸಿ ಪೊಲೀಸರಿಗೆ ಕೊಟ್ಟಿದ್ದಾಗಿ, ಅದರಲ್ಲಿ ಮೃತ ಶೇಷಪ್ಪ @ ಶಶಿಕುಮಾರ @ ಶಶಿ ಮತ್ತು ಆರೋಪಿಯಾದ ನಿನ್ನ ಹೆಸರು ನಮೂದಾಗಿರುವುದು ಕಂಡುಬಂದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-77 ಫ್ರಾ.ಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ದಿಃ 29-01-2022 ರಂದು ಪೊಲೀಸರು ಅವರನ್ನು ಚಿಕ್ಕಮಗಳೂರಿನ ನ್ಯಾಯಾಧೀಶರ ಬಳಿ ಹಾಜರುಪಡಿಸಿದಾಗ ಸದರಿ ನ್ಯಾಯಾಧೀಶರು ಅವರನ್ನು ವಿಚಾರಿಸಿದಾಗ ಅವರು ಅವರಿಗೆ ನಡೆದ ವಿಚಾರವನ್ನು ತಿಳಿಸಿ ಹೇಳಿಕೆ ಕೊಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-78 ಪ್ರಾ.ಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು 2022 ನೇ ಇಸವಿ ಫೆಬ್ರವರಿ ತಿಂಗಳಿನಲ್ಲಿ ಒಂದು ದಿನ ಚಿಕ್ಕಮಗಳೂರಿನ ಡಿ.ವೈ.ಎಸ್.ಪಿ. ರವರು ಅವರ ಕಛೇರಿಗೆ ಅವರನ್ನು ಕರೆಸಿ ವಿಚಾರಿಸಿದ್ದಾಗಿ, ಅಡುಗೆ ವಿಚಾರದಲ್ಲಿ ಗಲಾಟೆಯಾಗಿ ಆರೋಪಿಯಾದ ನೀನು ಶೇಷಪ್ಪನನ್ನು ಕೊಲೆ ಮಾಡಿದ್ದಾಗಿ ತಿಳಿದಿದ್ದಾಗಿ ಸಾಕ್ಷ್ಯನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-79 ಪ್ರಾ.ಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ತನಿಖಾ ಸಮಯದಲ್ಲಿ ಮೃತ ಶೇಷಪ್ಪ ಪರಿಶಿಷ್ಟ ಜಾತಿಗೆ ಸೇರಿದವನೆಂದು ಪೊಲೀಸರು ನನಗೆ ತಿಳಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-80 ಪ್ರಾ.ಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಆರೋಪಿಯಾದ ನೀನು ಉಪ್ಪಾರ ಜಾತಿಗೆ ಸೇರಿದವನೆಂದು ಪೊಲೀಸರು ಅವರಿಗೆ ತಿಳಿಸಿದ್ದಾಗಿ ಸಾಕ್ಷ್ಯನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-81 ಪ್ರಾ.ಸಾ.10-ಚೇತನ್ ಇವರು ತಮ್ಮ ಸಾಕ್ಷ್ಯದಲ್ಲಿ ಈಗ್ಗೆ 10 ವರ್ಷಗಳಿಂದ ಅವರು ಕಬ್ಬಿನಹಳ್ಳಿಯಲ್ಲಿರುವ ಎಸ್ಟೇಟಿನಲ್ಲಿ ರೈಟರ್ ಆಗಿ ಕೆಲಸ ಮಾಡಿಕೊಂಡಿದ್ದಾಗಿ, ಘಟನೆಯ ಒಂದು ವಾರದ ಹಿಂದೆ ಆರೋಪಿಯಾದ ನೀನು ಮತ್ತು ಮೃತ ಶೇಷಪ್ಪ ಅಲಿಯಾಸ್ ಶಶಿ ಅಲಿಯಾಸ್ ಶಶಿಕುಮಾರ ಸದರಿ ಎಸ್ಟೇಟಿಗೆ ಕೆಲಸ ಕೇಳಿಕೊಂಡು ಬಂದಿದ್ದಾಗಿ , ಆಗ ಅವರ ಮಾಲೀಕರು ನಿಮಗೆ ಕೆಲಸವನ್ನು ಕೊಟ್ಟಿದ್ದಾಗಿ ಸಾಕ್ಷ್ಯನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಚೇತನ್ ರವರು ಯಾರೆಂದು ನನಗೆ ಗೊತ್ತಿಲ್ಲ

ಪ್ರಶ್ನೆ-82 ಪ್ರಾ.ಸಾ.10 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು, ಎಸ್ಟೇಟಿನ ಕೂಲಿ ಲೈನ್‌ನಲ್ಲಿರುವ ಮೊದಲನೆ ಮನೆಯಲ್ಲಿ ಆರೋಪಿಯಾದ ನೀನು ಮತ್ತು ಮೃತ ಶೇಷಪ್ಪ ಉಳಿದುಕೊಳ್ಳಲು ಹೇಳಿ, ಮನೆಯನ್ನು ಅವರಿಗೆ ತೋರಿಸಿ, ಮನೆಯ ಕೀಯನ್ನು ಅವರಿಗೆ ಕೊಡುವಂತೆ ಮಾಲೀಕರು ಅವರಿಗೆ ಹೇಳಿದ ಮೇರೆಗೆ ಅವರು ನಿನ್ನನ್ನು ಮೃತ ಶೇಷಪ್ಪ ರವರನ್ನು ಸದರಿ ಕೂಲಿ ಲೈನ್ ಮನೆಗೆ ಕರೆದುಕೊಂಡು ಹೋಗಿ, ಬೀಗವನ್ನು ತೆಗೆದು ಕೊಟ್ಟಿದ್ದಾಗಿ, ಸದರಿ ಮನೆಯಲ್ಲಿ ನೀನು ಮತ್ತು ಮೃತ ಶೇಷಪ್ಪ ರವರು ಒಟ್ಟಿಗೆ ಉಳಿದುಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು

ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-83 ಫ್ರಾ.ಸಾ.10 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ದಿಃ 17-11-2021 ರಂದು ಎಸ್ಟೇಟಿನಲ್ಲಿ ಬಟವಾಡೆ ಇದ್ದು, ಆ ದಿನ ಕೆಲಸಗಾರರಿಗೆ ರಜೆ ಇದ್ದುದ್ದಾಗಿ , ಬಟವಾಡೆಯಾದ ನಂತರ ಆರೋಪಿಯಾದ ನೀನು ಮತ್ತು ಮೃತ ಶೇಷಪ್ಪ ರವರು ಚಿಕ್ಕಮಗಳೂರಿನ ಸಂತೆಗೆ ಹೋಗಿ ಬಂದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-84 ಫ್ರಾ.ಸಾ.10 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಆ ದಿನ ಸಂಜೆ 4.30 ಗಂಟೆ ಸುಮಾರಿಗೆ ನೀನು ಮತ್ತು ಮೃತ ಶೇಷಪ್ಪ ಅಡುಗೆ ಮಾಡುವ ವಿಚಾರಕ್ಕೆ ಜೋರು ಜೋರಾಗಿ ಮಾತನಾಡುತ್ತಾ ಜಗಳ ಮಾಡಿಕೊಳ್ಳುತ್ತಿದ್ದುದಾಗಿ, ಗಲಾಟೆಯ ಶಬ್ದ ಕೇಳಿ ಅವರು ನೀವು ವಾಸವಾಗಿದ್ದ ಸದರಿ ಮನೆಗೆ ಹೋಗಿ ಇಬ್ಬರನ್ನು ಕರೆದು ಯಾಕೆ ಜಗಳ ಮಾಡಿಕೊಳ್ಳುತ್ತಿದ್ದೀರಿ ಎಂದು ಕೇಳಿದ್ದಾಗಿ, ಆಗ ನೀನು ಅಡುಗೆ ಮಾಡುತ್ತಿದ್ದಾಗಿ, ಶಶಿ ಅಡುಗೆ ಚೆನ್ನಾಗಿಲ್ಲವೆಂದು ಹೇಳಿದ್ದಾಗಿ, ಈ ದಿನ ಮಾಂಸವನ್ನು ತಂದಿದ್ದೇನೆ ಅದನ್ನಾದರೂ ಚೆನ್ನಾಗಿ ಮಾಡು ಎಂದು ಶಶಿ ನಿನಗೆ ಹೇಳಿದ ವಿಚಾರಕ್ಕೆ ನೀವು ಗಲಾಟೆ ಮಾಡುತ್ತಿರುವುದಾಗಿ ಹೇಳಿದ್ದಾಗಿ, ಆಗ ಅವರು ನಿಮ್ಮನ್ನು ಕುರಿತು 'ಮತ್ತೆ ಗಲಾಟೆ ಮಾಡಿಕೊಳ್ಳಬೇಡಿ, ಮಾಡಿಕೊಂಡರೆ ಸಾಹುಕಾರರಿಗೆ ಹೇಳುತ್ತೇನೆ' ಎಂದು ಹೇಳಿ ಅಲ್ಲಿಂದ ಸಾಹುಕಾರರ ಮನೆಗೆ ಹೋಗಿದ್ದಾಗಿ, ಫ್ರಾಸಾ.9-ವಾಸುದೇವ್ ರವರಿಗೆ ನೀನು ಮತ್ತು ಮೃತ ಶೇಷಪ್ಪ ಜಗಳ ಮಾಡಿಕೊಳ್ಳುತ್ತಿದ್ದ ವಿಚಾರವನ್ನು ತಿಳಿಸಿದ ನಂತರ ಅವರು ಅವರ ಮನೆಗೆ ವಾಪಸ್ ಹೋಗಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-85 ಫ್ರಾ.ಸಾ.10 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಮಾರನೆ ದಿನ ಅಂದರೆ ದಿಃ 18-11-2021 ರಂದು ಆರೋಪಿಯಾದ ನೀನು ಮತ್ತು ಮೃತ ಶೇಷಪ್ಪ ಕೆಲಸಕ್ಕೆ ಬಾರದಿದ್ದಾಗಿ, ಅವರು ಆ ವಿಚಾರವನ್ನು ಅವರ ಮಾಲೀಕರಿಗೆ ತಿಳಿಸಿದ್ದಾಗಿ, ಸಂಜೆಯಾದರೂ ಅವರು ಕೆಲಸಕ್ಕೆ ಬಾರದ ಕಾರಣ ಸಂಜೆ 6 ಗಂಟೆ ಸುಮಾರಿಗೆ ಸಾಹುಕಾರರು ನೀವು ಯಾಕೆ ಕೆಲಸಕ್ಕೆ ಬಂದಿಲ್ಲವೆಂದು ಅವರ ಕೂಲಿ ಲೈನ್ ಮನೆಗೆ ಹೋಗಿ ನೋಡಿಕೊಂಡು ಬಾ ಎಂದು ಅವರಿಗೆ ಹೇಳಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಈ ಬಗ್ಗೆ ನೀವೇನು

ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-86 ಫ್ರಾ.ಸಾ.10 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅದರಂತೆ ಅವರು ಆರೋಪಿಯಾದ ನೀನು ಮತ್ತು ಮೃತ ಶೇಷಪ್ಪ ವಾಸವಾಗಿದ್ದ ಕೂಲಿ ಲೈನ್ ಮನೆಯ ಹತ್ತಿರ ಹೋಗಿ ನೋಡಿದಾಗ ಮನೆಯ ಬಾಗಿಲು ಮುಂದಕ್ಕೆ ಹಾಗೆ ಹಾಕಿದಂತೆ ಕಂಡುಬಂದಿದ್ದಾಗಿ, ನಿನ್ನ ಮತ್ತು ಮೃತ ಶೇಷಪ್ಪ ನ ಹೆಸರನ್ನು ಹಿಡಿದು ಕೂಗಿ ಕರೆದರೂ ಯಾರು ಮಾತನಾಡದಿದ್ದಾಗ ಅವರು ಮನೆಯ ಕಿಟಕಿಯಲ್ಲಿ ಅವರ ಬಳಿ ಇದ್ದ ಟಾರ್ಚ್ ಬಿಟ್ಟು ನೋಡಿದಾಗ ಮನೆಯ ಒಳಗೆ ಗೋಡೆಯ ಪಕ್ಕದಲ್ಲಿ ಯಾರೋ ಮಲಗಿದಂತೆ ಇದ್ದುದ್ದಾಗಿ, ಅವರ ಪಕ್ಕದಲ್ಲಿ ನೆಲದಲ್ಲಿ ಮತ್ತು ಗೋಡೆಯ ಮೇಲೆ ರಕ್ತ ಇರುವುದು ಕಂಡುಬಂದಿದ್ದಾಗಿ, ಅವರು ಕೂಡಲೇ ಫ್ರಾಸಾ.9-ವಾಸುದೇವ್‌ರವರಿಗೆ ಫೋನ್ ಮಾಡಿ ವಿಚಾರವನ್ನು ತಿಳಿಸಿ ಬೇಗ ಬನ್ನಿ ಎಂದು ಕರೆದಿದ್ದಾಗಿ, ನಂತರ ಫ್ರಾಸಾ.9 ಮತ್ತು ಅವರ ತಂದೆಯಾದ ಫ್ರಾಸಾ.8 ರವರು ಅಲ್ಲಿಗೆ ಬಂದಿದ್ದಾಗಿ, ಅವರೂ ಸಹ ಕಿಟಕಿಯಲ್ಲಿ ಟಾರ್ಚ ಬಿಟ್ಟು ನೋಡಿದಾಗ ಅವರಿಗೂ ಸಹ ಅದೇ ದೃಶ್ಯ ಕಂಡುಬಂದಿದ್ದಾಗಿ, ಫ್ರಾಸಾ.9 ರವರು ಮನೆಯ ಒಳಗೆ ಹೋಗಲಿಲ್ಲ ಮತ್ತು ಅವರಿಗೆ ಮತ್ತು ಫ್ರಾಸಾ.8 ರವರಿಗೂ ಒಳಗೆ ಹೋಗುವುದು ಬೇಡ ಇಲ್ಲಿಯೇ ಇರಿ ಎಂದು ಹೇಳಿ ಚಿಕ್ಕಮಗಳೂರು ಗ್ರಾಮಾಂತರ ಪೊಲೀಸರಿಗೆ ಫೋನ್ ಮಾಡಿ ಮಾಹಿತಿಯನ್ನು ತಿಳಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-87 ಫ್ರಾ.ಸಾ.10 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಂತರ ರಾತ್ರಿ 8 ಗಂಟೆ ಸುಮಾರಿಗೆ ಪೊಲೀಸರು ಅಲ್ಲಿಗೆ ಬಂದಿದ್ದಾಗಿ, ಅವರೊಂದಿಗೆ ಸಾಹುಕಾರರು ಆರೋಪಿಯಾದ ನೀನು ಮತ್ತು ಮೃತ ಶೇಷಪ್ಪ ವಾಸವಾಗಿದ್ದ ಕೂಲಿ ಮನೆಯ ಒಳಗೆ ಹೋಗಿ ಟಾರ್ಚ್ ಬೆಳಕಿನಲ್ಲಿ ನೋಡಿದಾಗ ಹಾಲ್ ನ ಗೋಡೆಯ ಪಕ್ಕದಲ್ಲಿ ಶೇಷಪ್ಪನ ಮೃತ ದೇಹ ಇರುವುದು ಕಂಡುಬಂದಿದ್ದಾಗಿ, ಆತನ ತಲೆ, ಕುತ್ತಿಗೆ ಮತ್ತು ಹೊಟ್ಟೆಯ ಭಾಗಗಳಿಗೆ ಗಾಯವಾಗಿ ರಕ್ತ ಬಂದಿದ್ದಾಗಿ, ಆತನನ್ನು ಯಾರೋ ಕೊಲೆ ಮಾಡಿರುವುದು ಕಂಡುಬಂದಿದ್ದಾಗಿ, ಆ ಸಮಯದದಲ್ಲಿ ಅಲ್ಲಿ ನೀನು ಇರಲಿಲ್ಲವೆಂದು, ಆ ಬಗ್ಗೆ ಶೇಷಪ್ಪ ನ ತಂದೆ ಪೊಲೀಸರಿಗೆ ನಿಪಿ.1 ರಂತೆ ದೂರನು ಕೊಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-88 ಫ್ರಾ.ಸಾ.10 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಂತರ ಪೊಲೀಸರು ಆರೋಪಿಯಾದ ನಿನ್ನನ್ನು ಆರೆಸ್ಟ್ ಮಾಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-89 ಫ್ರಾ.ಸಾ.10 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಶೇಷಪ್ಪ ಅಲಿಯಾಸ್ ಶಶಿ ಅಲಿಯಾಸ್ ಶಶಿಕುಮಾರನನ್ನು ಆರೋಪಿಯಾದ ನೀನೆ ಕೊಲೆ ಮಾಡಿದ್ದಾಗಿ ಒಪ್ಪಿಕೊಂಡಿದ್ದ ಬಗ್ಗೆ ಅವರಿಗೆ ತಿಳಿದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-90 ಫ್ರಾ.ಸಾ.10 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅವರ ಎಸ್ಟೇಟಿನ ಕೂಲಿ ಕೆಲಸಗಾರರ ಹಾಜರಾತಿ ಪುಸ್ತಕ ನಿಪಿ.22 ನ್ನು ಅವರು ನಿರ್ವಹಿಸುತ್ತಿದ್ದುದಾಗಿ, ಆರೋಪಿಯಾದ ನೀನು ಮತ್ತು ಮೃತ ಶೇಷಪ್ಪ ಅವರ ಎಸ್ಟೇಟ್ ನಲ್ಲಿ ಕೆಲಸಕ್ಕೆ ಸೇರಿಕೊಂಡ ಬಳಿಕ ಸಾಹುಕಾರರು ಹೇಳಿದಂತೆ ಅವರ ಹೆಸರನ್ನು ಸದರಿ ಪುಸ್ತಕದಲ್ಲಿ ನಮೂದು ಮಾಡಿದ್ದಾಗಿ, ಪ್ರತಿದಿನ ನಿಮ್ಮ ಮತ್ತು ಇತರೆ ಕೂಲಿ ಕೆಲಸಗಾರರ ಹಾಜರಾತಿಯನ್ನು ಅವರು ಅದರಲ್ಲಿ ನಮೂದು ಮಾಡುತ್ತಿದ್ದಾಗಿ, ನಿಪಿ.22 ರ ಕೊನೆಯಿಂದ 2 ಮತ್ತು 3 ನೇ ಕಲಂನಲ್ಲಿ ನಿನ್ನ ಹೆಸರು ಮನು ಮತ್ತು ಮೃತ ಶೇಷಪ್ಪ ನ ಹೆಸರು ನಮೂದು ಆಗಿರುವುದು ಕಂಡುಬಂದಿದ್ದಾಗಿ ಹಾಗೂ ಅದನ್ನು ಅವರೆ ಬರೆದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-91 ಫ್ರಾ.ಸಾ.10 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಂತರ ಪೊಲೀಸರು ಅವರನ್ನು ವಿಚಾರಿಸಿದಾಗ ಅವರು ಅವರಿಗೆ ಗೊತ್ತಿದ್ದ ವಿಚಾರವನ್ನು ತಿಳಿಸಿ ಹೇಳಿಕೆ ನೀಡಿದ್ದಾಗಿ, ಆರೋಪಿಯಾದ ನೀನು ಮತ್ತು ಮೃತ ಶೇಷಪ್ಪ ಅವರ ಎಸ್ಟೇಟಿನ ಒಂದು ಕೂಲಿ ಲೈನ್ ಮನೆಯಲ್ಲಿ ಒಟ್ಟಿಗೆ ವಾಸವಾಗಿದ್ದಾಗಿ, ಅವರಿಬ್ಬರು ಜಗಳ ಮಾಡುತ್ತಿದ್ದುದ್ದನ್ನು ಅವರು ಕೊನೆಯ ಬಾರಿಗೆ ನೋಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-92 ಪ್ರಾ.ಸಾ.10 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಂತರ ಪೊಲೀಸರು ಚಿಕ್ಕಮಗಳೂರಿನ ನ್ಯಾಯಾಧೀಶರ ಬಳಿ ಹಾಜರುಪಡಿಸಿದ್ದಾಗಿ, ಸದರಿ ನ್ಯಾಯಾಧೀಶರು ಅವರನ್ನು ವಿಚಾರಿಸಿದಾಗ ಅವರು ಅವರಿಗೆ ನಡೆದ ವಿಚಾರವನ್ನು ತಿಳಿಸಿ ಹೇಳಿಕೆ ಕೊಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-93 ಪ್ರಾ.ಸಾ.10 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಿಪಿ.3 ರಿಂದ ಪಿ.5 ಫೋಟೋಗಳಲ್ಲಿ ಆರೋಪಿಯಾದ ನೀನು ಮತ್ತು ಮೃತ ಶೇಷಪ್ಪ ವಾಸವಾಗಿದ್ದ ಕೂಲಿ ಲೈನ್ ಮನೆ ಹಾಗೂ ಶೇಷಪ್ಪ ಕೊಲೆಯಾಗಿರುವುದು ಕಂಡುಬರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-94 ಪ್ರಾ.ಸಾ.11-ನಾಗರಾಜ, ಆಗಿನ ಮೂಡಿಗೆರೆ ತಾಲ್ಲೂಕಿನ ತಹಸೀಲ್ದಾರ್ ಇವರು ತಮ್ಮ ಸಾಕ್ಷ್ಯದಲ್ಲಿ ಚಿಕ್ಕಮಗಳೂರು ಗ್ರಾಮಾಂತರ ಪೊಲೀಸರ ದಿಃ 29.11.2021 ರಂದು ನಿಪಿ.24 ರ ಮನವಿಯು ದಿಃ 30-11-2021 ರಂದು ಅವರ ಕಛೇರಿಯಲ್ಲಿ ಸ್ವೀಕೃತಗೊಂಡಿದ್ದಾಗಿ, ಸದರಿ ಮನವಿಯಲ್ಲಿ ಸದರಿ ಠಾಣಾ ಮೊಕದ್ದಮೆ ಸಂಖ್ಯೆ: 352/2021 ರ ಪ್ರಕರಣದ ಮೃತ ಶೇಷಪ್ಪ @ ಶಶಿ ಬಿನ್ ಶಾಂತಪ್ಪ ರವರ ಜಾತಿ ದೃಢೀಕರಣ ಪತ್ರವನ್ನು ನೀಡುವಂತೆ ಕೋರಿದ ಮೇರೆಗೆ ರಾಜಸ್ವ ನಿರೀಕ್ಷಕರು ಮತ್ತು ಗ್ರಾಮ ಲೆಕ್ಕಾಧಿಕಾರಿಗಳನ್ನು ಬಿದರಹಳ್ಳಿ ಗ್ರಾಮಕ್ಕೆ ಕಳುಹಿಸಿ ಅವರಿಂದ ಪರಿಶೀಲಿಸಿ ದಿಃ 06.01.2022 ರಂದು ವರದಿಯನ್ನು ಪಡೆದುಕೊಂಡಿದ್ದಾಗಿ, ಆನಂತರ ಆ ಬಗ್ಗೆ ಮೃತನ ತಂದೆಯಾದ ಶಾಂತಪ್ಪ ಬಿನ್ ರಾಜುರವರು ಪರಿಶಿಷ್ಟ ಜಾತಿ ಆದಿಕರ್ನಾಟಕ ಜನಾಂಗಕ್ಕೆ ಸೇರಿದವರು ಎಂದು ನಿಪಿ.26 ರಂತೆ ಜಾತಿ ಪ್ರಮಾಣಪತ್ರವನ್ನು ಪಡೆದುಕೊಂಡಿದ್ದಾಗಿ, ಅದರ ಮೇರೆಗೆ ಮೃತ ಶೇಷಪ್ಪರವರು ಪರಿಶಿಷ್ಟ ಜಾತಿಯ ಆದಿಕರ್ನಾಟಕ ಜನಾಂಗಕ್ಕೆ ಸೇರಿದವನೆಂದು ದಿಃ 15-02-2022 ರಂದು ತನಿಖಾಧಿಕಾರಿಗಳಿಗೆ ನಿಪಿ.25 ರಂತೆ ವರದಿಯನ್ನು ಸಲ್ಲಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-95 ಪ್ರಾ.ಸಾ.12-ಮಲ್ಲಿಕಾರ್ಜುನ ಬಿ.ಎಂ., ಆಗಿನ ಚಿಕ್ಕಮಗಳೂರು ಲೋಕೋಪಯೋಗಿ ಇಲಾಖೆಯ ಸಹಾಯಕ ಇಂಜಿನಿಯರ್ ಇವರು

ತಮ್ಮ ಸಾಕ್ಷ್ಯದಲ್ಲಿ ದಿಃ 29-11-2021 ರಂದು ಚಿಕ್ಕಮಗಳೂರು ಗ್ರಾಮಾಂತರ ಪೊಲೀಸರು ಅವರ ಇಲಾಖೆಗೆ ನಿಪಿ.27 ರಂತೆ ಮನವಿಯನ್ನು ಸಲ್ಲಿಸಿ, ಸದರಿ ಮನವಿಯ ಮೇರೆಗೆ ದಿಃ 29-11-2021 ರಂದು ಸದರಿ ಠಾಣೆಯ ಮಹಿಳಾ ಪಿಸಿ.82 ಚಾಸಾ.25-ನಾಗರತ್ನರವರು ಅವರನ್ನು ಕಬ್ಬಿನಹಳ್ಳಿ ಗ್ರಾಮದ ರಮೇಶಗೌಡ ರವರಿಗೆ ಸೇರಿದ ಕಾಫಿ ಎಸ್ಟೇಟಿನ ಕೂಲಿ ಲೈನಿನಲ್ಲಿದ್ದ ಒಂದು ಮನೆಗೆ ಕರೆದುಕೊಂಡು ಹೋಗಿ ಕೃತ್ಯ ನಡೆದ ಸ್ಥಳವನ್ನು ತೋರಿಸಿದ ಮೇರೆಗೆ ಅವರು ಸದರಿ ಸ್ಥಳವನ್ನು ಪರಿಶೀಲಿಸಿದ್ದಾಗಿ, ನಿಪಿ.28 ರಂತೆ ನಕ್ಷೆಯನ್ನು ತಯಾರಿಸಿ, ಅವರ ಸಹಾಯಕ ಕಾರ್ಯಪಾಲಕ ಇಂಜಿನಿಯರವರಿಗೆ ನೀಡಿದ್ದು, ಅವರು ಅದನ್ನು ಪತ್ರ ನಿಪಿ.29 ರಂತೆ ಸಂಬಂಧಿಸಿದ ಪೊಲೀಸರಿಗೆ ದಿಃ 09-12-2021 ರಂದು ನೀಡಿದ್ದಾಗಿ, ಪೊಲೀಸರು ಅದನ್ನು ದಿಃ 13-12-2021 ರಂದು ಸ್ವೀಕರಿಸಿದ್ದಾಗಿ, ನಿಪಿ.16 ಫೋಟೋದಲ್ಲಿ ಅವರು ನಕ್ಷೆಯನ್ನು ತಯಾರಿಸಿದ ಮನೆ ಮತ್ತು ನಿಪಿ.3 ರಿಂದ ನಿಪಿ.5 ಫೋಟೋಗಳಲ್ಲಿ ಸದರಿ ಮನೆಯಲ್ಲಿ ಕೃತ್ಯ ನಡೆದ ಸ್ಥಳ ಕಂಡುಬರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-96 ಪ್ರಾ.ಸಾ.13-ವಿಜಯ ಹೆಚ್, ಆಗಿನ ಹಿರೇಕೊಳಲೆ ಗ್ರಾಮ ಪಂಚಾಯ್ತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 29-11-2021 ರಂದು ಚಿಕ್ಕಮಗಳೂರು ಗ್ರಾಮಾಂತರ ಪೊಲೀಸ್ ಠಾಣೆಯ ನಿರೀಕ್ಷಕರು ಅವರ ಕಛೇರಿಗೆ ನಿಪಿ.30 ರಂತೆ ಮನವಿಯನ್ನು ಸಲ್ಲಿಸಿ, ಸದರಿ ಠಾಣಾ ಮೊಕದ್ದಮೆ ಸಂಃ 352/2021 ಕ್ಕೆ ಸಂಬಂಧಿಸಿದಂತೆ ಕೃತ್ಯ ನಡೆದ ಸ್ಥಳವಾದ ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಕಬ್ಬಿನಹಳ್ಳಿ ಗ್ರಾಮದ ಸರ್ವೆ ನಂಬರು 212/2 ರಲ್ಲಿರುವ ಪ್ರಾಸಾ.4 ರಮೇಶಗೌಡರವರಿಗೆ ಸೇರಿದ ಕಾಫಿ ಎಸ್ಟೇಟಿನಲ್ಲಿ ಕಟ್ಟಿಸಿರುವ ಕೂಲಿ ಲೈನ್ ಮನೆಗಳಿಗೆ ಸಂಬಂಧಪಟ್ಟ ಅಸೆಸ್‌ಮೆಂಟ್ ಮತ್ತು ದಾಖಲೆಯನ್ನು ನೀಡುವಂತೆ ಕೋರಿದ ಮೇರೆಗೆ ಅವರು ಸದರಿ ಮನವಿಯನ್ನು ದಿಃ 14-12-2021 ರಂದು ಸ್ವೀಕರಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-97 ಪ್ರಾ.ಸಾ.13 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅವರ ಕಛೇರಿಯಲ್ಲಿದ್ದ ಸದರಿ ಸ್ಥಳಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಪರಿಶೀಲಿಸಿದ್ದಾಗಿ, ಕಬ್ಬಿನಹಳ್ಳಿ ಕಾಫಿ ಎಸ್ಟೇಟಿನಲ್ಲಿ ಕಟ್ಟಿರುವ ಕೂಲಿ ಲೈನ್ ಮನೆಗಳು ಕೆ.ರಮೇಶ್ ಬಿನ್ ಕಲ್ಲೇಗೌಡ ಎಂಬುವವರ ಹೆಸರಿನಲ್ಲಿ ಆಸ್ತಿ ಸಂಖ್ಯೆ 82/85 ರಂತೆ ದಾಖಲಾಗಿರುವುದು ಕಂಡುಬಂದಿದ್ದಾಗಿ, ಸದರಿ ಎಸ್ಟೇಟಿನಲ್ಲಿ ರಮೇಶ್ ರವರಿಗೆ ಸೇರಿದ ಒಂದು ಆರ್.ಸಿ.ಸಿ ಮನೆ ಒಂದು ಮಂಗಳೂರಿನ ಹೆಂಚಿನ

ಗೋಡೌನ್ ಮತ್ತು ಕೂಲಿ ಲೈನ್ ಮನೆಗಳಿಗೆ ಒಟ್ಟಾಗಿ ಆಸ್ತಿ ಸಂಖ್ಯೆ 82/85 ನ್ನು ನೀಡಿದ್ದಾಗಿ, ಆ ಬಗ್ಗೆ ಅವರು ನಿಪಿ.32 ರಂತೆ ಡಿಮ್ಯಾಂಡ್ ರಿಜಿಸ್ಟರ್ ಎಕ್ಸಟ್ರ್ಯಾಕ್ಟನ ದೃಢೀಕೃತ ಪ್ರತಿಯನ್ನು ಲಗತ್ತಿಸಿ ಅದೇ ದಿನ ಪೊಲೀಸರಿಗೆ ನಿಪಿ.31 ರಂತೆ ವರದಿಯನ್ನು ನೀಡಿದ್ದಾಗಿ, ಪೊಲೀಸರು ಅದನ್ನು ದಿಃ 15-12-2021 ರಂದು ಸ್ವೀಕರಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-98 ಫ್ರಾ.ಸಾ.14 ನಾಗರತ್ನ, ಚಿಕ್ಕಮಗಳೂರು ಗ್ರಾಮಾಂತರ ಪೋಲೀಸ್ ಠಾಣೆಯ ಮಹಿಳಾ ಪೇದೆ ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 19-11-2021 ರಂದು ಈ ಪ್ರಕರಣದ ತನಿಖಾ ಕಾಲದಲ್ಲಿ ತನಿಖಾಧಿಕಾರಿ ಚಾಸಾ.39-ಸ್ವರ್ಣ, ವೃತ್ತ ನಿರೀಕ್ಷಕರು ಕೃತ್ಯ ನಡೆದ ಸ್ಥಳದಲ್ಲಿ ಪಂಚನಾಮೆಯನ್ನು ಜರುಗಿಸುವ ಕಾಲಕ್ಕೆ ಅವರ ಆದೇಶದ ಮೇರೆಗೆ ಫೋಟೋಗಳನ್ನು ತೆಗೆದು ವಿಡಿಯೋ ಚಿತ್ರಿಕರಿಸಿ, ನಂತರ ಅವುಗಳನ್ನು ನಿಪಿ.34 ರಂತೆ ಸಿ.ಡಿ ಗೆ ವರ್ಗಾಯಿಸಿ, ಅದೇ ದಿನ ಅವರು ತನಿಖಾಧಿಕಾರಿಗಳಿಗೆ ನಿಪಿ.35 ರಂತೆ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65(ಬಿ) ರಡಿಯಲ್ಲಿ ದೃಢೀಕರಣ ಪತ್ರವನ್ನು ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-99 ಫ್ರಾ.ಸಾ.14 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಂತರ ತನಿಖಾಧಿಕಾರಿಗಳ ಆದೇಶದ ಮೇರೆಗೆ ದಿಃ 29-11-2021 ರಂದು ಫ್ರಾಸಾ.12-ಮಲ್ಲಿಕಾರ್ಜುನ ಬಿ.ಎಂ ರವರಿಗೆ ಕೃತ್ಯ ನಡೆದ ಸ್ಥಳದ ನಕ್ಷೆಯನ್ನು ತಯಾರಿಸಿ ಕೊಡುವಂತೆ ಅವರನ್ನು ಕಬ್ಬಿನಹಳ್ಳಿ ಗ್ರಾಮದ ಕಬ್ಬಿನಹಳ್ಳಿ ಎಸ್ಟೇಟಿನ ಕೂಲಿ ಲೈನ್ ಮನೆಗೆ ಕರೆದುಕೊಂಡು ಹೋಗಿ ಅವರಿಗೆ ಕೃತ್ಯ ನಡೆದ ಸ್ಥಳವನ್ನು ತೋರಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-100 ಫ್ರಾ.ಸಾ.15 ರಂಗನಾಥನ್, ಆಗಿನ ಮುಖ್ಯ ಪೇದೆ ಹಾಗೂ ಚಿಕ್ಕಮಗಳೂರು ಡಿ.ವೈ.ಎಸ್.ಪಿ ಕಛೇರಿಯಲ್ಲಿ ಒಒಡಿ ಆಧಾರದ ತನಿಖಾ ಸಹಾಯಕರು ತಮ್ಮ ಸಾಕ್ಷ್ಯದಲ್ಲಿ ಚಿಕ್ಕಮಗಳೂರು ಗ್ರಾಮಾಂತರ ಪೊಲೀಸ್ ಠಾಣೆ ಮೊಕದ್ದಮೆ ಸಂಃ 352/2021 ರ ತನಿಖಾಧಿಕಾರಿ ಚಾಸಾ.40-ಪ್ರಭು ರವರ ಆದೇಶದ ಮೇರೆಗೆ ದಿಃ 12-02-2022 ರಂದು 6 ಜನ ಸಾಕ್ಷಿದಾರರ ಹೇಳಿಕೆಗಳನ್ನು ದಾಖಲಿಸಿಸುವ ಸಮಯದಲ್ಲಿ ಅವರು ಅವರ ಸೂಚನೆಯ ಮೇರೆಗೆ ಆಡಿಯೋ ಮತ್ತು

ವಿಡಿಯೋ ಚಿತ್ರಿಕರಿಸಿ ನಂತರ ನಿಪಿ.36 ರಂತೆ ಡಿವಿಡಿಗೆ ವರ್ಗಾಯಿಸಿದ್ದಾಗಿ, ನಂತರ ಆ ಬಗ್ಗೆ ಅದೇ ದಿನ ಅವರು ಚಾಸಾ.40 ರವರಿಗೆ ಭಾರತೀಯ ಸಾಕ್ಷ್ಯ ಅಧಿನಿಯಮ 65 ಬಿ ರಡಿಯಲ್ಲಿ ನಿಪಿ.37 ರಂತೆ ದೃಢೀಕರಣ ಪತ್ರವನ್ನು ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-101 ಫ್ರಾ.ಸಾ.16 ಪರಮೇಶ ಹೆಚ್.ಡಿ, ಆಗಿನ ಚಿಕ್ಕಮಗಳೂರಿನ ಗ್ರಾಮಾಂತರ ಪೊಲೀಸ್ ಠಾಣೆಯ ಮುಖ್ಯ ಪೇದೆ ತಮ್ಮ ಸಾಕ್ಷ್ಯದಲ್ಲಿ ದಿಃ 19.11.2021 ರಂದು ಅವರು ಠಾಣಾಧಿಕಾರಿಯಾಗಿದ್ದಾಗ ಬೆಳಿಗ್ಗೆ 9 ಗಂಟೆಗೆ ಬಿದರೆಹಳ್ಳಿ ಗ್ರಾಮದ ವಾಸಿ ಫ್ರಾಸಾ.2-ಶಾಂತಪ್ಪ ಬಿನ್ ರಾಜು ರವರು ಅವರ ತಮ್ಮನ ಮಗನಾದ ಸಂತೋಷ ರವರೊಂದಿಗೆ ಅವರ ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರು ನಿಪಿ.1 ನ್ನು ಸ್ವೀಕರಿಸಿ ಠಾಣಾ ಮೊಕದ್ದಮೆ ಸಂಖ್ಯೆಃ 352/2021 ರಂತೆ ಪ್ರಕರಣ ದಾಖಲಿಸಿದ್ದಾಗಿ, ನಿಪಿ.7 ರಂತೆ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿದ್ದಾಗಿ. ನಂತರ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ.39- ಸ್ವರ್ಣ, ವೃತ್ತ ನಿರೀಕ್ಷಕರಿಗೆ ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-102 ಫ್ರಾ.ಸಾ.17 ಹಾಲಪ್ಪ, ಆಗಿನ ಚಿಕ್ಕಮಗಳೂರು ಗ್ರಾಮಾಂತರ ಪೊಲೀಸ್ ಠಾಣೆಯ ಮುಖ್ಯ ಪೇದೆ ತಮ್ಮ ಸಾಕ್ಷ್ಯದಲ್ಲಿ ದಿಃ 20-11-2021 ರಂದು ಸದರಿ ಠಾಣೆ ಮೊಕದ್ದಮೆ ಸಂಃ 352/2021 ರ ಪ್ರಕರಣದ ಅಮಾನತು ಮಹಜರ್ ಮತ್ತು ಶವ ತನಿಖಾ ಕಾಲದಲ್ಲಿ ತೆಗೆಯಲಾದ ನಿಪಿ.9, 10, 16 ರಿಂದ 21 ಫೋಟೋಗಳನ್ನು ತನಿಖಾಧಿಕಾರಿ ಚಾಸಾ.39-ಸ್ವರ್ಣ ರವರ ಸೂಚನೆಯ ಮೇರೆಗೆ ನಿಪಿ.34 ರಂತೆ ಸಿಡಿಗೆ ವರ್ಗಾಯಿಸಿದ್ದಾಗಿ, ಆ ಬಗ್ಗೆ ಅವರು ನಿಪಿ.38 ರಂತೆ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65(ಬಿ) ರಡಿಯಲ್ಲಿ ದೃಢೀಕರಣ ಪತ್ರವನ್ನು ತನಿಖಾಧಿಕಾರಿಗಳಿಗೆ ಕೊಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-103 ಫ್ರಾ.ಸಾ.17 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ದಿಃ 19-11-2021 ರಂದು ಚಾಸಾ.39 ರವರು ನೇಮಿಸಿದ್ದ ಮೇರೆಗೆ ಮೃತ ಶೇಷಪ್ಪನ ಶವ ಬೆಂಗಾವಾಲು ಕರ್ತವ್ಯವನ್ನು ನಿರ್ವಹಿಸಿದ್ದಾಗಿ, ಆತನ ಮರಣೋತ್ತರ ಪರೀಕ್ಷೆ ಪೂರ್ಣಗೊಂಡ ಬಳಿಕ ಶವವನ್ನು ಫ್ರಾಸಾ.2 ರವರಿಗೆ ಬಿಟ್ಟುಕೊಟ್ಟು ನಿಪಿ.8

ರಂತೆ ರಸೀದಿ ಪಡೆದುಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-104 ಫ್ರಾ.ಸಾ.18-ಸ್ವರ್ಣ ಜಿ.ಎಸ್, ಆಗಿನ ಚಿಕ್ಕಮಗಳೂರು ಗ್ರಾಮಾಂತರ ಪೋಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರು ತಮ್ಮ ಸಾಕ್ಷ್ಯದಲ್ಲಿ ದಿಃ 18-11-2021 ರಂದು ಸಂಜೆ ಸುಮಾರು 7.30 ಗಂಟೆಗೆ ಅವರು ಠಾಣೆಯಲ್ಲಿದ್ದಾಗ ಫ್ರಾಸಾ.9- ವಾಸುದೇವ್‌ರವರು ಠಾಣೆಗೆ ಕರೆ ಮಾಡಿ ಅವರ ಎಸ್ಟೇಟಿನ ಕೂಲಿ ಲೈನಿನಲ್ಲಿ ಶೇಷಪ್ಪ ಎಂಬುವವರ ಕೊಲೆಯಾಗಿದ್ದಾಗಿ ತಿಳಿಸಿದ್ದರ ಮೇರೆಗೆ ಅವರು ಕೂಡಲೆ ಸಿಬ್ಬಂದಿಯೊಂದಿಗೆ ಕಬ್ಬಿನಹಳ್ಳಿ ಗ್ರಾಮದಲ್ಲಿರುವ ಫ್ರಾಸಾ.9 ರವರ ಕಬ್ಬಿನಹಳ್ಳಿ ಎಸ್ಟೇಟಿನ ಕೂಲಿಲೈನಿಗೆ ಸಂಜೆ ಸುಮಾರು 8 ರಿಂದ 8.15 ಭೇಟಿ ನೀಡಿದ್ದಾಗಿ, ಮನೆಗೆ ಬೀಗವನ್ನು ಹಾಕಿರದ ಕಾರಣ, ಅವರು ಬಾಗಿಲನ್ನು ತಳ್ಳಿಕೊಂಡು ಮನೆಯ ಒಳಗೆ ಹೋಗಿ ನೋಡಿದಾಗ ಮನೆಯ ಒಳಭಾಗದಲ್ಲಿ ಮೊದಲಿಗೆ ಚಪ್ಪಲಿಗಳನ್ನು ಬಿಡುವ ಒಂದು ಕೊಠಡಿ ಇದ್ದುದ್ದಾಗಿ, ಸದರಿ ಕೊಠಡಿಯ ನಂತರದಲ್ಲಿ ಇನ್ನೊಂದು ಕೊಠಡಿ ಇದ್ದುದ್ದಾಗಿ, ಸದರಿ ಕೊಠಡಿಯಲ್ಲಿ ಒಬ್ಬ ವ್ಯಕ್ತಿಯ ಮೃತದೇಹ ರಕ್ತದ ಮಡುವಿನಲ್ಲಿ ಅಂಗಾಂತವಾಗಿ ಬಿದ್ದಿದ್ದಾಗಿ, ಮೇಲ್ನೋಟಕ್ಕೆ ಯಾರೋ ಯಾವುದೋ ಆಯುಧದಿಂದ ಚುಚ್ಚಿ ಕೊಲೆ ಮಾಡಿದ್ದಾಗಿ ಕಂಡುಬಂದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-105 ಫ್ರಾ.ಸಾ.18 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಂತರ ಮೃತನ ತಂದೆಯ ಬಗ್ಗೆ ಮಾಹಿತಿ ಪಡೆದುಕೊಂಡು ಆತನಿಗೆ ಫೋನ್ ಮಾಡಿ ವಿಚಾರ ತಿಳಿಸಿದಾಗ ಅವರು ಸಕಲೇಶಪುರದಲ್ಲಿ ಇರುವುದಾಗಿ, ಕೂಡಲೇ ಬರಲು ಸಾಧ್ಯವಾಗುವುದಿಲ್ಲ, ಮಾರನೆ ದಿನ ಬಂದು ದೂರು ನೀಡುತ್ತೇನೆ ಎಂದು ತಿಳಿಸಿದ ಮೇರೆಗೆ ಅವರು ಸಿಬ್ಬಂದಿಗಳನ್ನು ಶವದ ಬೆಂಗಾವಾಲಿಗೆ ನೇಮಿಸಿ ಠಾಣೆಗೆ ವಾಪಸ್ ಬಂದಿದ್ದಾಗಿ, ಯಾವುದೋ ಆಯುಧದಿಂದ ಚುಚ್ಚಿ ಕೊಲೆ ಮಾಡಿದ್ದಾಗಿ ಕಂಡುಬಂದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-106 ಫ್ರಾ.ಸಾ.18 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ದಿಃ 19-11-2021 ರಂದು ಮೃತನ ತಂದೆಯಾದ ಫ್ರಾಸಾ.2-ಶಾಂತಪ್ಪ ಠಾಣೆಗೆ ಹಾಜರಾಗಿ

ನೀಡಿದ ದೂರು ನಿಪಿ.1 ನ್ನು ಸ್ವೀಕರಿಸಿದ್ದಾಗಿ, ಫ್ರಾಸಾ.16-ಪರಮೇಶ್ ರವರು ಪ್ರಕರಣವನ್ನು ದಾಖಲಿಸಿ ಕಡತವನ್ನು ತನಿಖೆಗಾಗಿ ಅವರಿಗೆ ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-107 ಫ್ರಾ.ಸಾ.18 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅದೇ ದಿನ ಅವರು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿದ್ದಾಗಿ, ಸ್ಥಳಕ್ಕೆ ಫ್ರಾಸಾ.1-ಸುರೇಶ್ ಮತ್ತು ಚಾಸಾ.5-ಸಿದ್ದಾರ್ಥ ರವರಿಗೆ ನಿಪಿ.11 ರಂತೆ ನೋಟೀಸು ಕೊಟ್ಟು ಪಂಚರನ್ನಾಗಿ ಬರಮಾಡಿಕೊಂಡಿದ್ದಾಗಿ, ಸ್ಥಳದಲ್ಲಿ ಹಾಜರಿದ್ದ ಫ್ರಾಸಾ.9-ವಾಸುದೇವ ರವರು ಕೃತ್ಯ ಸ್ಥಳವನ್ನು ತೋರಿಸಿದ್ದಾಗಿ, ಸದರಿ ಪಂಚರ ಸಮಕ್ಷಮ ಸ್ಥಳ ಪರಿಶೀಲಿಸಿ, ಸದರಿ ಮನೆಯ ಅಡುಗೆ ಮನೆಯಲ್ಲಿ ಬಿದ್ದಿದ್ದ ರಕ್ತ, ಮೃತ ದೇಹ ಬಿದ್ದಿದ್ದ ಸ್ಥಳದಲ್ಲಿ ಇದ್ದ ರಕ್ತವನ್ನು ಸಂಗ್ರಹಿಸಿದ್ದಾಗಿ, ಗೋಡೆಯ ಮೇಲೆ ಚಿಮ್ಮಿದ್ದ ರಕ್ತವನ್ನು ಕೆರೆದಿದ್ದಾಗಿ, ಸುಣ್ಣ ಹೊಡೆದ ಗೋಡೆಯ ಮೇಲೆ ಇದ್ದ ಖಾಲಿ ಮಣ್ಣನ್ನು ಮಾದರಿಗಾಗಿ ಸಂಗ್ರಹಿಸಿದ್ದಾಗಿ, ಮೃತ ದೇಹ ಬಿದ್ದಿದ್ದ ಸ್ಥಳದಿಂದ ಅಡುಗೆ ಮನೆಗೆ ಹೋಗುವ ಬಾಗಿಲಿನ ನೆಲದಲ್ಲಿ ಹಾಕಿದ್ದ ರಕ್ತದ ಕಲೆಗಳಿದ್ದ ಬಿಳಿ ನೀಲಿ ಮಿಶ್ರ ಬಣ್ಣದ ಒಂದು ಹರಿದ ಪ್ಲಾಸ್ಟಿಕ್ ಚೀಲ, ಮೃತ ದೇಹದ ಪಕ್ಕದಲ್ಲಿ ಬಿದ್ದಿದ್ದ ಮಾಸಲು ಬಿಸ್ಕೇಟ್ ಬಣ್ಣದ ರಕ್ತದ ಕಲೆಗಳಿದ್ದ ಅರ್ಧ ತೋಳಿನ ಟೀ ಶರ್ಟು ಹಾಗೂ ಮಾಸಲು ಸಿಮೆಂಟ್ ಬಣ್ಣದ ರಕ್ತದ ಕಲೆಯಿದ್ದ ಒಂದು ಬನಿಯನ್ ಮುದ್ದೆಮಾಲು-1 ರಿಂದ 7 ನ್ನು ಪಂಚರ ಸಮಕ್ಷಮ ಅಮಾನತು ಪಡಿಸಿಕೊಂಡಿದ್ದಾಗಿ, ಆ ಬಗ್ಗೆ ಬೆಳಿಗ್ಗೆ 9.30 ಗಂಟೆಯಿಂದ ಮಧ್ಯಾಹ್ನ 12 ಗಂಟೆಯವರೆಗೆ ನಿಪಿ.2 ರಂತೆ ಮಹಜರನ್ನು ಜರುಗಿಸಿದ್ದಾಗಿ, ಅವರ ಸೂಚನೆಯ ಮೇರೆಗೆ ಫ್ರಾಸಾ.14-ನಾಗರತ್ನ ರವರು ನಿಪಿ.3 ರಿಂದ ಪಿ.5 ಫೋಟೋಗಳನ್ನು ತೆಗೆದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-108 ಫ್ರಾ.ಸಾ.18 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಂತರ ಶವ ತನಿಖೆಗಾಗಿ ಶವವನ್ನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ಶವಗಾರಕ್ಕೆ ಚಾಸಾ.30- ರುದ್ರೇಶ್ ರವರನ್ನು ಬೆಂಗಾವಾಲಿನಲ್ಲಿ ಕಳುಹಿಸಿದ್ದಾಗಿ, ನಂತರ ಅವರು ಸದರಿ ಶವಗಾರಕ್ಕೆ ಭೇಟಿ ನೀಡಿದ್ದಾಗಿ, ಫ್ರಾಸಾ.6-ಸಿದಾರ್ಥ್, ಚಾಸಾ.4-ಸನ್ನತ್ ಮತ್ತು ಚಾಸಾ.6-ರಾಜುರವರಿಗೆ ಶವ ಪಂಚನಾಮೆಗೆ ಪಂಚರಾಗಿ ಸಹಕರಿಸುವಂತೆ ನಿಪಿ.12 ರಂತೆ ನೋಟೀಸನ್ನು ಜಾರಿ ಮಾಡಿದ್ದಾಗಿ, ಮಧ್ಯಾಹ್ನ 12.30 ಗಂಟೆಯಿಂದ 2.30 ಗಂಟೆಯವರೆಗೆ ನಿಪಿ.13 ರಂತೆ ಶವ ತನಿಖೆಯನ್ನು ನಡೆಸಿ, ನಿಪಿ.9 ಮತ್ತು ಪಿ.10 ರಂತೆ ಫೋಟೋಗಳನ್ನು ತೆಗೆಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು

ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-109 ಫ್ರಾ.ಸಾ.18 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಶವ ತನಿಖಾ ಕಾಲದಲ್ಲಿ ಮೃತನ ಮೈಮೇಲೆ ಕಂಡುಬಂದ ಗಾಯಗಳ ವಿವರಗಳನ್ನು ಮತ್ತು ಆತನ ಮೈಮೇಲೆ ಇದ್ದ ಬಟ್ಟೆಗಳ ವಿವರಗಳನ್ನು ಶವ ತನಿಖಾ ವರದಿ ನಿಪಿ.40 ರಲ್ಲಿ ನಮೂದು ಮಾಡಿದ್ದಾಗಿ, ಆ ಸಮಯದಲ್ಲಿ ಮೃತನ ರಕ್ತ ಸಂಬಂಧಿಕರಾದ ಫ್ರಾಸಾ.3, ಚಾಸಾ.7 ಮತ್ತು ಚಾಸಾ.9 ಮತ್ತು ಇತರೆ ಸಾಕ್ಷಿದಾರರಾದ ಫ್ರಾಸಾ.4 ಮತ್ತು ಚಾಸಾ.11 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದಾಗಿ, ನಂತರ ಮರಣೋತ್ತರ ಪರೀಕ್ಷೆಯನ್ನು ನಡೆಸಿಕೊಡುವಂತೆ ಫಾರಂ 146 ನಿಪಿ.41 ನ್ನು ಭರ್ತಿ ಮಾಡಿ ವರದಿಯೊಂದಿಗೆ ಜಿಲ್ಲಾ ಆಸ್ಪತ್ರೆಯ ವೈದ್ಯಾಧಿಕಾರಿಗಳಿಗೆ ನೀಡಿದ್ದಾಗಿ, ಮರಣೋತ್ತರ ಪರೀಕ್ಷೆಯ ನಂತರ ಶವವನ್ನು ಫ್ರಾಸಾ.2 ರವರ ವಶಕ್ಕೆ ನೀಡಿ ರಸೀದಿ ನಿಪಿ.8 ನ್ನು ಪಡೆದುಕೊಂಡು ಠಾಣೆಗೆ ಹಿಂದಿರುಗಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-110. ಫ್ರಾ.ಸಾ.18 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಆರೋಪಿಯಾದ ನಿನ್ನ ಪತ್ತೆಗಾಗಿ ಚಾಸಾ.26-ಜಯರಾಂ ಮತ್ತು ಚಾಸಾ.27-ನಂಜಪ್ಪ ರವರನ್ನು ನೇಮಿಸಿ ಕಳುಹಿಸಿದ್ದಾಗಿ, ನಂತರ ಅದೇ ದಿನ ಸಾಕ್ಷಿದಾರರಾದ ಫ್ರಾಸಾ.9-ವಾಸುದೇವ ಮತ್ತು ಫ್ರಾಸಾ.10-ಚೇತನ್ ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದಾಗಿ, ದಿಃ 20-11-2021 ರಂದು ಬೆಳಿಗ್ಗೆ 7 ಗಂಟೆಗೆ ಚಾಸಾ.26 ಮತ್ತು ಚಾಸಾ.27 ರವರು ಆರೋಪಿಯಾದ ನಿನ್ನನ್ನು ಕಂಚುಗಲ್ ಗ್ರಾಮದಲ್ಲಿ ವಶಕ್ಕೆ ಪಡೆದು ಬೆಳಿಗ್ಗೆ 9 ಗಂಟೆಗೆ ಅವರು ಠಾಣೆಯಲ್ಲಿದ್ದಾಗ ಅವರ ಮುಂದೆ ಹಾಜರುಪಡಿಸಿದ್ದಾಗಿ, ಆ ಬಗ್ಗೆ ಚಾಸಾ.27 ರವರು ನಿಪಿ.42 ರಂತೆ ವರದಿ ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-111 ಫ್ರಾ.ಸಾ.18 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಂತರ ಆರೋಪಿಯಾದ ನಿನ್ನನ್ನು ಬಂಧಿಸಿ ನಿನ್ನ ಸ್ವಇಚ್ಛಾ ಹೇಳಿಕೆ ನಿಪಿ.43 ನ್ನು ದಾಖಲಿಸಿದ್ದಾಗಿ, ನಿನ್ನ ಸ್ವಇಚ್ಛಾ ಹೇಳಿಕೆಯಲ್ಲಿ "ನನ್ನನ್ನು ಕಬ್ಬಿನಹಳ್ಳಿ ರಮೇಶಗೌಡರ ತೋಟದ ಕೂಲಿ ಲೈನಿಗೆ ಕರೆದುಕೊಂಡು ಹೋದರೆ ನಾನು ಶೇಷಪ್ಪನನ್ನು ಕೊಲೆ ಮಾಡಿದ ಸ್ಥಳ, ಕೊಲೆ ಮಾಡಲು ಬಳಸಿದ ಕತ್ತಿ

ಹಾಗೂ ಚಾಕು ಮತ್ತು ಕೊಲೆ ಮಾಡುವ ಸಮಯದಲ್ಲಿ ನಾನು ಧರಿಸಿದ್ದ ರಕ್ತವಾಗಿದ್ದ ಬಟ್ಟೆಗಳನ್ನು ಇಟ್ಟಿರುವ ಸ್ಥಳವನ್ನು ತೋರಿಸುತ್ತೇನೆ " ಎಂದು ನೀನು ನುಡಿದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-112 ಪ್ರಾ.ಸಾ.18 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಂತರ ಆರೋಪಿಯನ್ನು ಕರೆದುಕೊಂಡು ಹಿರೇಕೊಳಲೆ ಗ್ರಾಮ ಪಂಚಾಯಿತ್ತಿಗೆ ಹೋಗಿದ್ದಾಗಿ, ಸದರಿ ಪಂಚಾಯಿತ್ತಿಯ ಪಿ.ಡಿ.ಓ. ರವರನ್ನು ಕುರಿತು ಪಂಚನಾಮೆ ಜರುಗಿಸಲು ಇಬ್ಬರು ಸಿಬ್ಬಂದಿಗಳನ್ನು ಪಂಚರನ್ನಾಗಿ ಕಳುಹಿಸುವಂತೆ ಕೋರಿದ ಮೇರೆಗೆ ಪಿ.ಡಿ.ಓ. ರವರು ಅವರ ಕಛೇರಿಯ ಬಿಲ್ ಕಲೆಕ್ಟರ್, ಗ್ರಂಥಾಲಯ ಮೇಲ್ವಿಚಾರಕರಾದ ಪ್ರಾಸಾ.7-ಚಂದ್ರಶೇಖರ್ ಮತ್ತು ಚಾಸಾ.13-ಅರುಣಕುಮಾರ ರವರಿಗೆ ಪಂಚರಾಗಿ ಸಹಕರಿಸುವಂತೆ ಕೋರಿ ನಿಪಿ.14 ರಂತೆ ನೋಟೀಸನ್ನು ಜಾರಿ ಮಾಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-113 ಪ್ರಾ.ಸಾ.18 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಂತರ ಆರೋಪಿಯಾದ ನೀನು ಪಂಚರನ್ನು ಕರೆದುಕೊಂಡು ಕಬ್ಬಿನಹಳ್ಳಿ ಎಸ್ಟೇಟಿಗೆ ಹೋಗಿದ್ದಾಗಿ, ಅಲ್ಲಿಂದ ನೀನು ಅವರನ್ನು ಮತ್ತು ಪಂಚರನ್ನು ಸದರಿ ಎಸ್ಟೇಟಿನ ಕೂಲಿ ಲೈನ್ ಮನೆಗೆ ಕರೆದುಕೊಂಡು ಹೋಗಿ ಅದೇ ಮನೆಯಲ್ಲಿ ನೀನು ಶೇಷಪ್ಪನನ್ನು ಕೊಲೆ ಮಾಡಿದ್ದಾಗಿ ತಿಳಿಸಿದ್ದಾಗಿ. ಸದರಿ ಮನೆಯ ಅಡುಗೆ ಮನೆಯಲ್ಲಿ ನೀನು ಶೇಷಪ್ಪನಿಗೆ ಕತ್ತಿಯಿಂದ ಹೊಡೆದು ಕೊಲೆ ಮಾಡಿ, ನಂತರ ಆತನನ್ನು ನಡುಮನೆಗೆ ಎಳೆದುಕೊಂಡು ಬಂದು ಚಾಕುವಿನಿಂದ ಚುಚ್ಚಿದ ಜಾಗ ಅದೇ ಎಂದು ನಡುಮನೆಯಲ್ಲಿ ಸ್ಥಳವನ್ನು ತೋರಿಸಿದ್ದಾಗಿ, ನಂತರ ನೀನು ಕೃತ್ಯಕ್ಕೆ ಬಳಸಿದ ಕತ್ತಿ ಮತ್ತು ಚಾಕುವನ್ನು ಒಂದು ಪ್ಲಾಸ್ಟಿಕ್ ಚೀಲದಲ್ಲಿ ಹಾಕಿ ಅದನ್ನು ಯಾರಿಗೂ ಕಾಣದಂತೆ ಮನೆಯ ಹಿಂಭಾಗದ ಸೂರಿನಲ್ಲಿ ಬಚ್ಚಿಟ್ಟಿರುವುದಾಗಿ ತಿಳಿಸಿ ಅಡುಗೆ ಮನೆಗೆ ಹೊಂದಿಕೊಂಡಿರುವ ಬಾಗಿಲಿನ ಮುಖಾಂತರ ಹೊರಗೆ ಹೋಗಿ ಸೂರಿನ ಹೆಂಚಿನ ಕೆಳಗೆ ಇಟ್ಟಿದ್ದ ಒಂದು ಬಿಳಿ ಪ್ಲಾಸ್ಟಿಕ್ ಚೀಲವನ್ನು ತೆಗೆದು ಅದರಲ್ಲಿ ಸುತ್ತಿಟ್ಟಿದ್ದ ಮು.ಮಾ-8 ಮತ್ತು 9 ಎಂದು ಗುರುತಿಸಲ್ಪಟ್ಟಿರುವ ಕತ್ತಿ ಮತ್ತು ಚಾಕುವನ್ನು ತೋರಿಸಿ ಅದೇ ಕತ್ತಿಯಿಂದ ನೀನು ಶೇಷಪ್ಪನ ತಲೆ, ಮುಖ ಮತ್ತು ಕತ್ತಿಗೆ ಕಡಿದಿದ್ದಾಗಿ ಮತ್ತು ಅದೇ ಚಾಕುವಿನಿಂದ ಶೇಷಪ್ಪನ ಹೊಟ್ಟೆಗೆ ಚುಚ್ಚಿದ್ದಾಗಿ ತಿಳಿಸಿ ಪಂಚರ ಸಮಕ್ಷಮ ಹಾಜರುಪಡಿಸಿದ್ದಾಗಿ, ಸದರಿ ಕತ್ತಿಯ ಮೇಲೆ ರಕ್ತದ ಕಲೆಗಳು ಇರುವುದು ಕಂಡುಬಂದಿದ್ದಾಗಿ ಸಾಕ್ಷ್ಯ

ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ-114 ಫ್ರಾ.ಸಾ.18 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಂತರ ಆರೋಪಿಯಾದ ನೀನು ಕೃತವೆಸಗಿದ್ದ ಕಾಲದಲ್ಲಿ ಧರಿಸಿದ್ದ ಬಟ್ಟೆಗಳಿಗೆ ರಕ್ತವಾಗಿದ್ದರಿಂದ ನೀನು ಅವುಗಳನ್ನು ಬಿಚ್ಚಿ ಒಂದು ಬ್ಯಾಗಿನಲ್ಲಿ ಹಾಕಿ ಬಚ್ಚಲು ಮನೆಯ ಬಾಗಿಲಿನ ಹಿಂಭಾಗದಲ್ಲಿ ಇಟ್ಟಿದ್ದಾಗಿ ತಿಳಿಸಿ, ಮು.ಮಾ-10 ಮತ್ತು 11 ಎಂದು ಗುರುತಿಸಲ್ಪಟ್ಟಿರುವ ರಕ್ತದ ಕಲೆಗಳಾಗಿದ್ದ ಒಂದು ಮಾಸಲು ಬಿಸ್ಕೇಟ್ ಬಣ್ಣದ ತುಂಬು ತೋಳಿನ ಶರ್ಟು ಮತ್ತು ಕಂದು ಬಣ್ಣದ ಪ್ಯಾಂಟ್‌ನ್ನು ಪಂಚರ ಸಮಕ್ಷಮ ಹಾಜರುಪಡಿಸಿದ್ದಾಗಿ, ಅವುಗಳನ್ನು ಪರಿಶೀಲಿಸಲಾಗಿ ಅಮಾನತು ಪಡಿಸಿಕೊಂಡು ಮಧ್ಯಾಹ್ನ 12.30 ರಿಂದ 2.30 ಗಂಟೆಯವರೆಗೆ ನಿಪಿ.15 ರಂತೆ ಮಹಜರನ್ನು ಜರುಗಿಸಿದ್ದಾಗಿ, ನಿಪಿ.16 ರಿಂದ ನಿಪಿ.21 ರಂತೆ ಫೋಟೋಗಳನ್ನು ತೆಗೆಸಿದ್ದಾಗಿ ಮತ್ತು ವಿಡಿಯೋ ಚಿತ್ರಿಕರಣ ಮಾಡಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ-115 ಫ್ರಾ.ಸಾ.18 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಿಪಿ-15 ಪಂಚನಾಮೆಗೆ ನಿನ್ನ ಸಹಿಯನ್ನು ಪಡೆದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ-116 ಫ್ರಾ.ಸಾ.18 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅದೇ ದಿನ ಅಂದರೆ ದಿಃ 20-11-2021 ರಂದು ಫ್ರಾಸಾ.8 ರವರ ಹೇಳಿಕೆಯನ್ನು ಪಡೆದುಕೊಂಡಿದ್ದಾಗಿ ಮತ್ತು ಫ್ರಾಸಾ.17 ರವರಿಂದ ನಿಪಿ.38 ರಂತೆ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65(ಬಿ) ರಡಿಯಲ್ಲಿ ದೃಢೀಕರಣ ಪತ್ರವನ್ನು ಪಡೆದುಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ-117 ಫ್ರಾ.ಸಾ.18 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ದಿಃ 29-11-2021 ರಂದು ಮೃತ ಶೇಷಪ್ಪ ಮತ್ತು ಆರೋಪಿಯಾದ ನಿನ್ನ ಜಾತಿ ಪ್ರಮಾಣಪತ್ರವನ್ನು ನೀಡುವಂತೆ ಮೂಡಿಗೆರೆ ತಹಸೀಲ್ದಾರ್ ಮತ್ತು ಕಡೂರು ತಹಸೀಲ್ದಾರ್ ರವರಿಗೆ ಹಾಗೂ ಕಬ್ಬಿನಹಳ್ಳಿ ಗ್ರಾಮದ ಸರ್ವೆ ನಂಬರು 212/2 ರ ಪಹಣಿಯನ್ನು ನೀಡುವಂತೆ ಕೋರಿ ಚಿಕ್ಕಮಗಳೂರು ತಹಸೀಲ್ದಾರ್ ರವರಿಗೆ ನಿಪಿ.46 ರಂತೆ ಮನವಿಗಳನ್ನು ಸಲ್ಲಿಸಿದ್ದಾಗಿ, ದಿಃ 15.12.2021 ರಂದು ಫ್ರಾಸಾ.13-ವಿಜಯ್ ರವರಿಂದ ಕಬ್ಬಿನಹಳ್ಳಿ ಗ್ರಾಮದ

ಸರ್ವೆ ನಂಬರು 212/2 ರಲ್ಲಿರುವ ಕಾಫಿ ಎಸ್ಟೇಟಿನಲ್ಲಿರುವ ಕೂಲಿ ಲೈನ್ ಮನೆಗಳ ಅಸೆಸಮೆಂಟ್ ರಿಜಿಸ್ಟರಿನ ದೃಢೀಕೃತ ಪ್ರತಿ ನಿಪಿ.31 ನ್ನು ನಿಪಿ.32 ರ ಪತ್ರದೊಂದಿಗೆ ಪಡೆದುಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ-118 ಫ್ರಾ.ಸಾ.18 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅದೇ ದಿನ ಕೃತ್ಯ ನಡೆದ ಸ್ಥಳದ ನಕ್ಷೆಯನ್ನು ತಯಾರಿಸಿಕೊಡುವಂತೆ ಚಿಕ್ಕಮಗಳೂರು ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರಿಗೆ ನಿಪಿ.27 ರಂತೆ ಮನವಿಯನ್ನು ಸಲ್ಲಿಸಿದ್ದಾಗಿ, ದಿಃ 13.12.2021 ರಂದು ಫ್ರಾಸಾ.12-ಮಲ್ಲಿಕಾರ್ಜುನ ರವರಿಂದ ಕೃತ್ಯ ನಡೆದ ಸ್ಥಳದ ನಕ್ಷೆ ಮತ್ತು ಪತ್ರವನ್ನು ನಿಪಿ.29 ರಂತೆ ಪಡೆದುಕೊಂಡಿದ್ದಾಗಿ, ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ-119 ಫ್ರಾ.ಸಾ.18 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಮೃತನ ಮರಣೋತ್ತರ ಪರೀಕ್ಷಾ ಕಾಲದಲ್ಲಿ ವೈದ್ಯರು ಸಂಗ್ರಹಿಸಿದ್ದ ವಸ್ತುಗಳನ್ನು ಮತ್ತು ಬಟ್ಟೆಗಳನ್ನು ಮತ್ತು ಮರಣೋತ್ತರ ಪರೀಕ್ಷಾ ವರದಿ ನಿಪಿ.48 ನ್ನು ಚಾಸಾ.30 ರುದ್ರೇಶ್ ರವರು ಪಡೆದುಕೊಂಡು ದಿಃ 30-11-2021 ರಂದು ಅವರ ಮುಂದೆ ಹಾಜರುಪಡಿಸಿದ್ದಾಗಿ, ಸದರಿ ವಸ್ತುಗಳನ್ನು ಮತ್ತು ಬಟ್ಟೆಗಳನ್ನು ನಿಪಿ.47 ರಂತೆ ಠಾಣಾ ಮಾಲುಪಟ್ಟಿ ಸಂಖ್ಯೆ 385/2021 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ಸಲ್ಲಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ-120 ಫ್ರಾ.ಸಾ.18 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅಮಾನತು ಪಡಿಸಿಕೊಂಡಿದ್ದ ವಸ್ತುಗಳನ್ನು ವೈಜ್ಞಾನಿಕ ಪರೀಕ್ಷೆಗಾಗಿ ಚಾಸಾ.32- ರವರ ಮುಖಾಂತರ ದಿಃ 02-12-2021 ರಂದು ಮಂಗಳೂರಿನ ಆರ್.ಎಫ್.ಎಸ್.ಎಲ್. ಕಳುಹಿಸಿಕೊಟ್ಟಿದ್ದಾಗಿ, ಈ ಬಗ್ಗೆ ದಿಃ 04-12-2021 ರಂದು ನಿಪಿ.49 ರಂತೆ ಹಿಂಬರಹವನ್ನು ತಂದು ಹಾಜರುಪಡಿಸಿದ್ದಾಗಿ, ದಿಃ 02.12.2021 ರಂದು ಚಾಸಾ.22 ರವರು ನೀಡಿದ ಹಿರೇಕೊಳಲೆ ಗ್ರಾಮದ ಸರ್ವೆ ನಂಬರು 212/2 ಕ್ಕೆ ಸಂಬಂಧಿಸಿದ ಪಹಣಿಯನ್ನು ನಿಪಿ.33 ರ ಪತ್ರದೊಂದಿಗೆ ಪಡೆದುಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ-121 ಫ್ರಾ.ಸಾ.18 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ದಿಃ 06-12-2021 ರಂದು ಕೃತ್ಯ ನಡೆದ ಸ್ಥಳ ಮತ್ತು ಸಮಯದಲ್ಲಿ ವಿದ್ಯುತ್ ಸರಬರಾಜು ಇದ್ದ ಬಗ್ಗೆ ಮಾಹಿತಿ ನೀಡುವಂತೆ ಚಾಸಾ.23 ರವರಿಗೆ ನಿಪಿ.50 ರಂತೆ ಮನವಿ ಸಲ್ಲಿಸಿ ಆ ಬಗ್ಗೆ ದಿಃ 24-12-2021 ರಂದು ಸದರಿಯವರಿಂದ ನಿಪಿ.51 ರಂತೆ ವರದಿ ಪಡೆದುಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ-122 ಫ್ರಾ.ಸಾ.18 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ದಿಃ 07-01-2022 ರಂದು ಚಾಸಾ.17 ರವರಿಂದ ಆರೋಪಿಯಾದ ನಿನ್ನ ಜಾತಿಯ ಬಗ್ಗೆ ನಿಪಿ.23 ರಂತೆ ವರದಿಯನ್ನು ಪಡೆದುಕೊಂಡಿದ್ದಾಗಿ, ದಿಃ 29-01-2022 ರಂದು ಫ್ರಾಸಾ.11-ನಾಗರಾಜು ರವರಿಂದ ಮೃತೆ ಶೇಷಪ್ಪರವರ ತಂದೆಯ ಜಾತಿ ಪ್ರಮಾಣಪತ್ರದ ಆನ್ ಲೈನ್ ಪ್ರತಿಯನ್ನು ನಿಪಿ.25 ರಂತೆ ಪಡೆದುಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ-123 ಫ್ರಾ.ಸಾ.18 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ದಿಃ 31-01-2022 ರಂದು ಪ್ರಕರಣಕ್ಕೆ ಎಸ್.ಸಿ/ಎಸ್.ಟಿ. ದೌರ್ಜನ್ಯ ತಡೆ ಕಾಯ್ದೆಯ ಕಲಂ 3(1)(ಎಸ್) ಮತ್ತು 3(2)(v) ಗಳನ್ನು ಹೆಚ್ಚುವರಿಯಾಗಿ ಅಳವಡಿಸಿಕೊಳ್ಳಲು ಕೋರಿ ನ್ಯಾಯಾಲಯಕ್ಕೆ ನಿಪಿ.52 ರಂತೆ ಮನವಿಯನ್ನು ಸಲ್ಲಿಸಿ ಆದೇಶ ಪಡೆದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ-124 ಫ್ರಾ.ಸಾ.18 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ದಿಃ 05-02-2022 ರಂದು ಮೇಲಾಧಿಕಾರಿಗಳ ಅನುಮತಿಯನ್ನು ಪಡೆದು ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ.40-ಪ್ರಭು ರವರಿಗೆ ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ-125 ಫ್ರಾ.ಸಾ.19- ಕಸ್ತೂರಿ ಒಡೆಯರ್,ವೈಜ್ಞಾನಿಕ ಅಧಿಕಾರಿ, ಪ್ರಾದೇಶಿಕ ವಿಧಿವಿಜ್ಞಾನ ಪ್ರಯೋಗಾಲಯ, ಮಂಗಳೂರು ತಮ್ಮ ಸಾಕ್ಷ್ಯದಲ್ಲಿ ದಿಃ 03.12.2021 ರಂದು ಚಿಕ್ಕಮಗಳೂರು ಗ್ರಾಮಾಂತರ ಪೋಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆಃ 352/2021 ಕ್ಕೆ ಸಂಬಂಧಿಸಿದ ಸೀಲಾಗಿದ್ದ 1) ಟೀ ಶರ್ಟ್, 2) ಬ್ಯಾಂಡೇಜ್ ಪಟ್ಟಿ, 3) ರಕ್ತದ ಮಾದರಿ, 4) ರಕ್ತದ ಮಾದರಿ, 5) ರಕ್ತದ ಕಲೆಯಿರುವ ಹತ್ತಿ, 6) ರಕ್ತದ ಕಲೆಗಳಿರುವ ಸ್ವಾಪಿಂಗ್‌ಗಳು ( ಕೆರೆದು ತೆಗೆದ

ರಕ್ತದ ಕಲೆಗಳು) 7), ಒಂದು ಪ್ಲಾಸ್ಟಿಕ್ ಚೀಲ 8) ಒಂದು ಟೀ ಶರ್ಟ್, 9) ಒಂದು ಬನಿಯನ್, 10) ಒಂದು ಕತ್ತಿ, 11) ಒಂದು ಶರ್ಟ್, 12) ಒಂದು ಪ್ಯಾಂಟ್ ನ್ನು ವೈಜ್ಞಾನಿಕ ಪರೀಕ್ಷೆಗಾಗಿ ತಮ್ಮ ಪ್ರಯೋಗಾಲಯಕ್ಕೆ ಪೊಲೀಸರು ಹಾಜರುಪಡಿಸಿದ್ದಾಗಿ , ಸದರಿ ವಸ್ತುಗಳನ್ನು ವೈಜ್ಞಾನಿಕ ಪರೀಕ್ಷೆಗೆ ಒಳಪಡಿಸಿದಾಗ ವಸ್ತು ಸಂಖ್ಯೆ 1, 2, 5, 6, 8 ರಿಂದ 13 ವಸ್ತುಗಳ ಮೇಲೆ ರಕ್ತದ ಕಲೆಗಳು ಇರುವ ಬಗ್ಗೆ ಧೃಡಪಟ್ಟಿದ್ದಾಗಿ, ಅವುಗಳನ್ನು ಸಿರಾಲಜಿ ಪರೀಕ್ಷೆಗೆ ಒಳಪಡಿಸಿದಾಗ ಸದರಿ ವಸ್ತುಗಳ ಮೇಲೆ ಕಂಡುಬಂದ ರಕ್ತ ಮಾನವ ಜಾತಿಯ 'ಎ' ರಕ್ತದ ಗುಂಪಿಗೆ ಸೇರಿದ ಕಲೆಗಳಾಗಿದ್ದು ಕಂಡುಬಂದಿದ್ದಾಗಿ, ಆ ಬಗ್ಗೆ ಅವರು ನಿಪಿ-53 ರಂತೆ ವರದಿ ನೀಡಿದ್ದಾಗಿ, ಅದನ್ನು ನಿಪಿ-54 ಮಾದರಿ ಸೀಲಿನೊಂದಿಗೆ ತನಿಖಾಧಿಕಾರಿಗಳಿಗೆ ಕಳುಹಿಸಿಕೊಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-126 ಫ್ರಾ.ಸಾ.20 ಡಾಃ ಲೋಹಿತ್ ಕುಮಾರ್ ಆರ್, ವಿಧಿವಿಜ್ಞಾನ ಜೌಷಧ ಮತ್ತು ವಿಷ ಶಾಸ್ತ್ರ ವಿಭಾಗದಲ್ಲಿ ಅಸೋಸಿಯೇಟ್ ಪ್ರೊಫೇಸರ್ ತಮ್ಮ ಸಾಕ್ಷ್ಯದಲ್ಲಿ ದಿಃ 19-11-2021 ರಂದು ಮಧ್ಯಾಹ್ನ 3.30 ಗಂಟೆಗೆ ಚಿಕ್ಕಮಗಳೂರು ಗ್ರಾಮಾಂತರ ಪೋಲೀಸ್ ಠಾಣೆಯ ಪೋಲೀಸ್ ನಿರೀಕ್ಷಕರಿಂದ ಮೂಡಿಗೆರೆ ತಾಲ್ಲೂಕು ಬಿದರಹಳ್ಳಿ ಗ್ರಾಮದ ಸುಮಾರು 34 ವರ್ಷ ವಯಸ್ಸಿನ ಶೇಷಪ್ಪ ನ ಶವದ ಮರಣೋತ್ತರ ಪರೀಕ್ಷೆ ನಡೆಸುವಂತೆ ಅವರಿಗೆ ನಿಪಿ.40 ರಂತೆ ಮನವಿ ಯನ್ನು ಹಾಗೂ ನಿಪಿ.41 ರಂತೆ ವರದಿಯನ್ನು ಸಲ್ಲಿಸಿದ್ದಾಗಿ, ಸದರಿ ಮೃತ ದೇಹವನ್ನು ಮುಖ್ಯ ಪೇದೆ 41 ಹಾಲಪ್ಪ ಎಂ.ಎಸ್ ಅಂದರೆ ಫ್ರಾಸಾ-17 ರವರು ಗುರುತಿಸಿದ್ದಾಗಿ, ಅವರು ಅದೇ ದಿನ ಮಧ್ಯಾಹ್ನ 3.35 ರಿಂದ 5.00 ಗಂಟೆಯವರೆಗೆ ಸದರಿ ಮೃತ ದೇಹದ ಮರಣೋತ್ತರ ಪರೀಕ್ಷೆಯನ್ನು ನಡೆಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-127 ಫ್ರಾ.ಸಾ.20 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು "On external examination, I noticed that the dead body was of fair complexioned adult male and nourished, measuring 168 cm in length and the rigormortis was in passing off stage, Livor mortis was present over the back except over pressure areas and w as fixed, No signs of putrefaction. I noticed the presence of sub-conjuctival hemorrhage” ಎಂದು ಸಾಕ್ಷ್ಯ

ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ-128 ಫ್ರಾ.ಸಾ.20 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಮೃತ ದೇಹದ ಮೇಲೆ 24 ಗಾಯಗಳು ಕಂಡುಬಂದಿದ್ದಾಗಿ, ದೇಹವನ್ನು ಛೇಧಿಸಿದಾಗ ಅದಕ್ಕೆ ಅನುರೂಪವಾದ ಒಳಗಾಯಗಳು ಕಂಡುಬಂದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-129 ಫ್ರಾಸಾ-20 ಇವರು ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಮು.ಮಾ-13 ಮತ್ತು 14 ಎಂದು ಗುರುತಿಸಲ್ಪಟ್ಟಿರುವ ಮೃತನ ರಕ್ತವನ್ನು ಮತ್ತು ಮೃತ ದೇಹದ ಮೇಲೆ ಕಂಡುಬಂದ ಮು.ಮಾ-12, 15, 16 ಎಂದು ಗುರುತಿಸಲ್ಪಟ್ಟಿರುವ ಒಂದು ನೀಲಿ ಬಣ್ಣದ ಬಿಳಿಯ ಚುಕ್ಕೆಗಳಿರುವ ತುಂಬುತೋಳಿನ ಶರ್ಟ್, ಒಂದು ಕಾಚಾ, ಕಪ್ಪು ಬಣ್ಣದ ಚಡ್ಡಿಯನ್ನು ಮತ್ತು ಮು.ಮಾ-17 ಎಂದು ಗುರುತಿಸಲ್ಪಟ್ಟಿರುವ ಮೃತ ದೇಹದ ಕುತ್ತಿಗೆ ಮತ್ತು ಹೊಟ್ಟೆಯ ಭಾಗದಲ್ಲಿದ್ದ ಒಂದು ಮಿಶ್ರ ಬಣ್ಣಗಳುಳ್ಳ ದಾರವನ್ನು ಸಂಗ್ರಹಿಸಿ, ಸಂರಕ್ಷಿಸಿ ಅವುಗಳನ್ನು ಮುಖ್ಯ ಪೇದೆ .41- ಹಾಲಪ್ಪ ಎಂ.ಎಸ್ ರವರ ಮೂಲಕ ಮೊಹರು ರೀತಿಯಲ್ಲಿ ತನಿಖಾಧಿಕಾರಿಗೆ ಹಸ್ತಾಂತರಿಸಿದ್ದಾಗಿ ಮತ್ತು ಮಾದರಿಗಳನ್ನು ವಿಧಿವಿಜ್ಞಾನ ಪ್ರಯೋಗಾಲಿಯಕ್ಕೆ ಪ್ರಯೋಗಾಲಯಕ್ಕೆ ಸಲ್ಲಿಸಲು ಸೂಚಿಸಿದ್ದಾಗಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-130 ಫ್ರಾಸಾ-20 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಪರೀಕ್ಷೆಯ ನಂತರ ಅವರು ಸಾವಿನ ಕಾರಣದ ಬಗ್ಗೆ ಅವರು ತಾತ್ಕಾಲಿಕ ಅಭಿಪ್ರಾಯವನ್ನು ನೀಡಿದ್ದಾಗಿ, ತೀವ್ರವಾದ ಕತ್ತರಿಸಿದ ಗಾಯಗಳು ಹಾಗೂ ತಲೆಗೆ ತೀವ್ರವಾದ ಗಾಯದ ಪರಿಣಾಮವಾಗಿ cranio-cerebral ಹಾನಿಯಿಂದಾಗಿ ಸಾವು ಸಂಭವಿಸಿದ್ದಾಗಿ, ಎಲ್ಲಾ ಗಾಯಗಳು ಮರಣ ಸಂಭವಿಸಬಹುದಾದ ಸ್ವಭಾವದ ಗಾಯಗಳಾಗಿದ್ದಾಗಿ, ಆ ಸಮಯದಲ್ಲಿ ಅವು ಹೊಸದಾದ ಗಾಯಗಳಾಗಿದ್ದಾಗಿ, ತಲೆಗೆ ಆದ ಗಾಯಗಳು ಸಾಮಾನ್ಯವಾಗಿ ಸಾವುಗೆ ಕಾರಣವಾಗಲು ಸಾಕಾಗಿದ್ದಾಗಿ, ಆದಾಗ್ಯೂ, ವಿಧಿವಿಜ್ಞಾನ ಪ್ರಯೋಗಾಲಯದ ವರದಿ ಬರುವುದು ಬಾಕಿ ಇದ್ದರಿಂದ ಅವರು ಅವರ ಅಂತಿಮ ಅಂತಿಮ ಅಭಿಪ್ರಾಯವನ್ನು ನೀಡಲು ಬಾಕಿ ಇರಿಸಿದ್ದಾಗಿ, ಈ ಸಂಬಂಧವಾಗಿ ಅವರು ದಿಃ 21.11.2021 ರಂದು ಮರಣೋತ್ತರ ಪರೀಕ್ಷಾ ವರದಿ ನಿಪಿ.48 ನ್ನು ನೀಡಿದ್ದಾಗಿ ಸಾಕ್ಷ್ಯ

ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-131 ಫ್ರಾಸಾ-20 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ತದನಂತರ ಅವರು ದಿಃ 22.02.2026 ರಂದು ಸಾವಿಗೆ ಕಾರಣದ ಕುರಿತು ಅವರ ಅಂತಿಮ ಅಭಿಪ್ರಾಯವನ್ನು ಕೋರಿ ತನಿಖಾಧಿಕಾರಿಯಿಂದ ಮನವಿ ಪತ್ರವನ್ನು ಸ್ವೀಕರಿಸಿದ್ದಾಗಿ, ಸದರಿ ಪ್ರಯೋಗಾಲಯದ ವರದಿಯ ಆಧಾರದ ಮೇಲೆ ಮತ್ತು ಅವರ ಪರೀಕ್ಷಾ ಆಧಾರದ ಮೇಲೆ ಅವರು ನಿಪಿ.48 ವರದಿಯಲ್ಲಿ ಅವರು ಉಲ್ಲೇಖಿಸಿರುವ ತಾತ್ಕಾಲಿಕ ಸಾವಿಗೆ ಕಾರಣ ಬದಲಾಗಿರುವುದಿಲ್ಲವೆಂದು ಅವರು ಅಭಿಪ್ರಾಯ ಪಟ್ಟಿದ್ದಾಗಿ, ಈ ನಿಟ್ಟಿನಲ್ಲಿ ಅವರು ಅದೇ ದಿನ ಅಂದರೆ ದಿಃ 22.02.2026 ರಂದು ಅವರ ನಿಪಿ.55 ರಂತೆ ಅಂತಿಮ ಅಭಿಪ್ರಾಯವನ್ನು ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-132 ಫ್ರಾಸಾ-20 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅವರ ಪರೀಕ್ಷಾ ಆಧಾರದ ಮೇಲೆ ತಲೆಗೆ ತೀವ್ರವಾದ ಗಾಯದ ಪರಿಣಾಮವಾಗಿ cranio-cerebral ಹಾನಿಯಿಂದಾಗಿ ಸಾವು ಸಂಭವಿಸಿ ಎಂದು ಅವರು ಅಭಿಪ್ರಾಯವನ್ನು ನೀಡಿದ್ದು, ಮುಂದುವರಿದು ಮೃತ ದೇಹದ ಮೇಲಿರುವ 24 ಗಾಯಗಳಲ್ಲಿ 13 ಗಾಯಗಳು ಅಂದರೆ ಸಂಖ್ಯೆ 1 ರಿಂದ 4, 7, 9, 10 ರಿಂದ 12 ಮತ್ತು 14 ರಿಂದ 17 ರ ಗಾಯಗಳು ಮುದ್ದೆಮಾಲು-8 ಆಯುಧದಿಂದ ದಾಳಿ ಮಾಡಿದರೆ ಸಾಧ್ಯವೆಂದು ಅವರು ಅಭಿಪ್ರಾಯ ಪಟ್ಟಿದ್ದಾಗಿ, ಮುದ್ದೆಮಾಲು-9 ರ ರೀತಿಯ ಆಯುಧದಿಂದ ಹಲ್ಲೆ ನಡೆಸಿದರೆ 5, 6,19 ರಿಂದ 24 ರ ಗಾಯಗಳಾಗುವ ಸಾಧ್ಯತೆ ಇರುವುದಾಗಿ ಹಾಗೂ ಗಾಯ ಸಂಖ್ಯೆ 8, 13 ಮತ್ತು 18 ಬಲ ಪ್ರಯೋಗದಿಂದಾಗಿ (blunt force impact) ಸಂಭವಿಸಬಹುದೆಂದು ಅಭಿಪ್ರಾಯ ಪಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-133 ಫ್ರಾಸಾ-21 ಪ್ರಭು, ಆಗಿನ ಚಿಕ್ಕಮಗಳೂರು ಉಪ-ವಿಭಾಗದ ಡಿ.ವೈ.ಎಸ್.ಪಿ ತಮ್ಮ ಸಾಕ್ಷ್ಯದಲ್ಲಿ ಈ ಪ್ರಕರಣದ ತನಿಖೆಯನ್ನು ನಡೆಸಲು ಚಿಕ್ಕಮಗಳೂರು ಪೊಲೀಸ್ ವರಿಷ್ಠಾಧಿಕಾರಿಗಳು ದಿಃ04-02-2022 ರಂದು ಅವರಿಗೆ ಆದೇಶಿಸಿದ ಆದೇಶ ನಿಪಿ.56 ನ್ನು ದಿಃ 11-02-2022 ರಂದು

ಪಡೆದುಕೊಂಡಿದ್ದಾಗಿ, ದಿಃ 11-02-2022 ರಂದು ಅವರು ಈ ಪ್ರಕರಣದ ಕಡತವನ್ನು ಫ್ರಾಸಾ.18 ರವರಿಂದ ಪಡೆದು ಪರಿಶೀಲಿಸಿದ್ದಾಗಿ, ದಿಃ 12.02.2022 ರಂದು ಫ್ರಾಸಾ.2 ರವರ ಮುಂದುವರೆದ ಹೇಳಿಕೆಯನ್ನು ಪಡೆದುಕೊಂಡಿದ್ದಾಗಿ, ಅದೇ ದಿನ ಸಾಕ್ಷಿದಾರರಾದ ಚಾಸಾ.7, ಫ್ರಾಸಾ.4, ಫ್ರಾಸಾ.8 ರಿಂದ 10 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದಾಗಿ, ಅವರು ಸದರಿ ಸಾಕ್ಷಿದಾರರ ಹೇಳಿಕೆಗಳನ್ನು ಪಡೆಯುವ ಕಾಲಕ್ಕೆ ಅವರ ಸೂಚನೆಯ ಮೇರೆಗೆ ಫ್ರಾಸಾ.15-ರಂಗನಾಥ ರವರು ವಿಡಿಯೋ ಚಿತ್ರಿಕರಿಸಿದ್ದಾಗಿ, ನಂತರ ಸದರಿ ವಿಡಿಯೋಗಳನ್ನು ಅವರ ಸೂಚನೆಯ ಮೇರೆಗೆ ನಿಪಿ.36 ರಂತೆ ಡಿವಿಡಿಗೆ ವರ್ಗಾಯಿಸಿ, ಆ ಬಗ್ಗೆ ನಿಪಿ.37 ರಂತೆ ಭಾರತೀಯ ಸಾಕ್ಷ್ಯ ಅಧಿನಿಯಮ 65(ಬಿ) ರಡಿಯಲ್ಲಿ ದೃಢೀಕರಣ ಪತ್ರದೊಂದಿಗೆ ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-134 ಫ್ರಾ.ಸಾ.21 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅದೇ ದಿನ ಮೃತರ ಜಾತಿ ಪ್ರಮಾಣಪತ್ರವನ್ನು ನೀಡುವಂತೆ ಫ್ರಾಸಾ.11 ರವರಿಗೆ ಮನವಿಯನ್ನು ಸಲ್ಲಿಸಿದ ಮೇರೆಗೆ ದಿಃ15.02.2022 ರಂದು ಫ್ರಾಸಾ.11 ರವರು ಮೃತನ ಜಾತಿಯ ಬಗ್ಗೆ ನಿಪಿ.25 ರಂತೆ ವರದಿಯನ್ನು ಅವರ ತಂದೆಯ ಜಾತಿಪ್ರಮಾಣಪತ್ರ ನಿಪಿ.26 ರೊಂದಿಗೆ ನೀಡಿದ್ದಾಗಿ, ಅವುಗಳನ್ನು ಕಡತಕ್ಕೆ ಅಳವಡಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ-135 ಫ್ರಾ.ಸಾ.21 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಅಲ್ಲಿಯವರೆಗೆ ಆದ ತನಿಖೆಯಿಂದ ಆರೋಪಿಯಾದ ನಿನ್ನ ವಿರುದ್ಧ ಆರೋಪ ಸಾಬೀತಾದ್ದರಿಂದ ದಿಃ 13-02-2022 ರಂದು ನಿನ್ನ ವಿರುದ್ಧ ದೋಷಾರೋಪಣಾ ಪತ್ರವನ್ನು ತಯಾರಿಸಿ ಮೇಲಾಧಿಕಾರಿಗಳಿಗೆ ಸಲ್ಲಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-136 ಫ್ರಾ.ಸಾ.21 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ನಂತರದಲ್ಲಿ ಎಫ್.ಎಸ್.ಎಲ್ ವರದಿ ಬಂದ ಮೇರೆಗೆ ಅದನ್ನು ಆಗಿನ ತನಿಖಾಧಿಕಾರಿಗಳು ಪಡೆದು ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿದ್ದಾಗಿ, ನಂತರದಲ್ಲಿ ದಿಃ 21.02.2026 ರಂದು ಅವರು ಮೃತನ ಮರಣೋತ್ತರ ಪರೀಕ್ಷೆ ನಡೆಸಿದ್ದ

ಪ್ರಾಸಾ.20-ಡಾ.ಲೋಹಿತ್ ಕುಮಾರ್ ರವರಿಗೆ ಮನವಿಯೊಂದಿಗೆ ಎಫ್.ಎಸ್.ಎಲ್ ವರದಿಯ ಪ್ರತಿಯನ್ನು ಕಳುಹಿಸಿಕೊಟ್ಟಿದ್ದಾಗಿ, ಮೃತನ ಸಾವಿನ ಬಗ್ಗೆ ಅಂತಿಮ ಅಭಿಪ್ರಾಯವನ್ನು ತಿಳಿಸುವಂತೆ ಕೋರಿದ್ದಾಗಿ, ಆ ಬಗ್ಗೆ ಪ್ರಾಸಾ.20 ರವರು ದಿಃ 22-02-2026 ರಂದು ಅವರ ಅಂತಿಮ ಅಭಿಪ್ರಾಯ ವರದಿಯನ್ನು ಸಲ್ಲಿಸಿದ್ದು, ಅದನ್ನು ಅವರು ದಿಃ 05-03-2026 ರಂದು ಪಡೆದುಕೊಂಡು ಸಿಬ್ಬಂದಿ ಮೂಲಕ ನ್ಯಾಯಾಲಯಕ್ಕೆ ಸಲ್ಲಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-137 ಪ್ರಾ.ಸಾ.22 ನಂಜಪ್ಪ ಅಗಿನ ಚಿಕ್ಕಮಗಳೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆ ತಮ್ಮ ಸಾಕ್ಷ್ಯದಲ್ಲಿ ದಿಃ 19-11-2021 ರಂದು ಪ್ರಾಸಾ.18-ಸ್ವರ್ಣ ರವರು ಅವರನ್ನು ಮತ್ತು ಚಾಸಾ.26-ಜಯರಾಂರವರನ್ನು ಚಿಕ್ಕಮಗಳೂರು ಗ್ರಾಮಾಂತರ ಪೊಲೀಸ್ ಠಾಣೆಯ ಮೊ.ಸಂಃ 352/2021 ರ ಆರೋಪಿಯಾದ ನಿನ್ನ ಪತ್ತೆಗಾಗಿ ಮೌಖಿಕವಾಗಿ ನೇಮಿಸಿ ಕಳುಹಿಸಿದ ಮೇರೆಗೆ ಅವರು ಅದೇ ದಿನ ನಿನ್ನ ಪತ್ತೆಗಾಗಿ ಕಡೂರು, ಸಿಂಗಟಗೆರೆ, ಪಂಚನಹಳ್ಳಿ ಕಡೆ ಹೋಗಿ ನಿನ್ನ ಬಗ್ಗೆ ಮಾಹಿತಿ ಸಂಗ್ರಹಿಸಿದ್ದಾಗಿ, ಬಾತ್ಮೀದಾರರಿಂದ ನೀನು ದಿಃ 20-11-2021 ರಂದು ಕಂಚುಕಲ್ ಗ್ರಾಮದಲ್ಲಿರುವ ನಿನ್ನ ಜಮೀನಿನ ಹತ್ತಿರ ರಸ್ತೆಯಲ್ಲಿ ಹೋಗುತ್ತಿರುವ ಬಗ್ಗೆ ಮಾಹಿತಿ ಬಂದ ಮೇರೆಗೆ ಅವರು ದಿಃ 20-11-2021 ರಂದು ಬೆಳಿಗ್ಗೆ 7 ಗಂಟೆ ಸುಮಾರಿಗೆ ಸದರಿ ಗ್ರಾಮಕ್ಕೆ ಹೋಗಿ ರಸ್ತೆಯಲ್ಲಿ ಹೋಗುತ್ತಿದ್ದ ನಿನ್ನನ್ನು ಹಿಡಿದು, ನಿನ್ನ ಹೆಸರು ಮತ್ತು ವಿಳಾಸವನ್ನು ಕೇಳಿ ಪಡೆದುಕೊಂಡಿದ್ದಾಗಿ, ನಿನ್ನನ್ನು ಕುರಿತು 'ಕಬ್ಬಿನಹಳ್ಳಿ ರಮೇಶಗೌಡರವರ ತೋಟದಲ್ಲಿ ಕೆಲಸ ಮಾಡುತ್ತಿದ್ದ ಮನು ನೀನೇ ಅಲ್ಲವೇ' ಎಂದು ಕೇಳಿದಾಗ ನೀನು ಹೌದು ಎಂದು ತಿಳಿಸಿದ್ದರಿಂದ ನಿನ್ನನ್ನು ವಶಕ್ಕೆ ಪಡೆದು ಬೆಳಿಗ್ಗೆ 9 ಗಂಟೆಗೆ ಠಾಣೆಗೆ ಹಿಂದಿರುಗಿ ಪ್ರಾಸಾ.18 ರವರ ಮುಂದೆ ಹಾಜರುಪಡಿಸಿದ್ದಾಗಿ,.ಆ ಬಗ್ಗೆ ಅವರು ಪ್ರಾಸಾ.18 ರವರಿಗೆ ನಿಪಿ.42 ರಂತೆ ವರದಿಯನ್ನು ಕೊಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-138 ಪ್ರಾ.ಸಾ.22 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರಿದು ಆರೋಪಿಯಾದ ನಿನ್ನನ್ನು ಆ ದಿನ ಅವರು ವಶಕ್ಕೆ ಪಡೆದು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-139 ನೀವೇನಾದರೂ ಹೇಳುವುದು ಇದೆಯೇ?

ಉತ್ತರಃ ನನ್ನ ಹೇಳಿಕೆಯನ್ನು ಪ್ರತ್ಯೇಕವಾಗಿ ಬರವಣಿಗೆಯಲ್ಲಿ ಸಲ್ಲಿಸುತ್ತಿದ್ದೇನೆ.

ಪ್ರಶ್ನೆ-140 ನಿಮ್ಮ ಪರವಾಗಿ ಯಾವುದಾದರೂ ಸಾಕ್ಷಿ ವಿಚಾರಣೆ ಮಾಡಿಸುತ್ತೀರಾ?

ಉತ್ತರಃ ಇಲ್ಲ

(ಮೇಲಿನ ಪ್ರಶ್ನೆಗಳನು ಆರೋಪಿಗೆ ಅರ್ಥವಾಗುವ ಕನ್ನಡ ಭಾಷೆಯಲ್ಲಿ ಕೇಳಿ ಆತನು ಕೊಟ್ಟ ಉತ್ತರವನ್ನು ನಾನೇ ಸ್ವತಃ ಕೇಳಿ ಬರೆದುಕೊಂಡಿರುವುದು ನಿಜವಾಗಿದೆ ಎಂದು ದೃಢೀಕರಿಸುತ್ತೇನೆ)

ದಿನಾಂಕಃ 18.03.2026

ಸಹಿ/-
(ಭಾನುಮತಿ ಬಿ.ಸಿ. )
1 ನೇ ಅಪರ ಸತ್ರ ಮತ್ತು ವಿಶೇಷ ನ್ಯಾಯಾಧೀಶರು
ಚಿಕ್ಕಮಗಳೂರು